ಶ್ರೀ ಎಸ್. ಆರ್. ರಾಮಯ್ಯ.—ಹೀಗೆ ವರ್ಷ ವರ್ಷ ನಷ್ಟಪಟ್ಟುಕೊಂಡಿದ್ದಾರೆ. ಈ ಕೈಗಾರಿಕೆ ಬಹಳಕಾಲ ಉಳಿಯಲಾರದೆಂಬುದು ಖಂಡಿತ, ಕೃತಕ ರೇಷ್ಮೆಯಿಂದ ಪೈಪೋಟಿ ಬರುತ್ತಿದೆಯೆಂದು ಅನೇಕರು ಹೇಳುತ್ತಾರೆ. ಹೀಗೆ ಪೈಪೋಟಿ ಇರಬೇಕಾದರೆ ನಮ್ಮ ಉತ್ಪತ್ತಿಯ ಖರ್ಚನ್ನು ಕಡಮೆ ಮಾಡಿಕೊಳ್ಳಬೇಕಾಗಿದೆ. ಹಾಗಿಲ್ಲದೆ ಹೋದರೆ ಪೈಪೋಟಿಯಿಂದಾಗಿ ಯಾರೂ ನಮ್ಮ ರೇಷ್ಮೆಯನ್ನು ಕೊಂಡುಕೊಳ್ಳಲು ಮುಂದೆ ಬರುವುದಿಲ್ಲ. ದೇಶದಲ್ಲಿ ಎಲ್ಲರಿಗೂ ಒಂದೇ ಸಮಾನವಾದ ಬಟ್ಟೆಹಾಕಿಕೊಳ್ಳಬೇಕೆಂದು ಆಸೆ ಇದ್ದೇ ಇರುತ್ತದೆ. ಬಡವರು ತಾವೂ ರೇಷ್ಮೆ ಬಟ್ಟೆ ಧರಿಸಿಕೊಳ್ಳಬೇಕೆಂದು ಇಷ್ಟಪಡುತ್ತಾರೆ. ಧಾರಣೆ ಹೆಚ್ಚಾದರೆ, ಬಡವರು ಕೃತಕ ರೇಷ್ಮೆಗೇ ಕೈಹಾಕುವುದು ಸ್ವಾಭಾವಿಕ. ಆದ್ದರಿಂದ ನಾವು ನಮ್ಮ ರೇಷ್ಮೆಯ ಬೆಲೆಯನ್ನು ಕಡಮೆಮಾಡಿಕೊಳ್ಳಬೇಕು. ಹೀಗೆ ಕಡಮೆ ಮಾಡಿಕೊಳ್ಳುವ ಬಗ್ಗೆ ನಾನಾ ಉಪಾಯಗಳನ್ನು ಕಂಡುಹಿಡಿಯಬೇಕು. ಈ ಹೊತ್ತು ಹಿಪ್ಪುನೇರಳೆ ಬೇಸಾಯವನ್ನು ಮಾಡುವ ಕಡೆ ಹೋಗಿ ನೋಡಿ. ಭೂಮಿಯಲ್ಲಿ ಹಿಪ್ಪುನೇರಳೆಗೆ ಅವಶ್ಯಕವಾದ, ಪುಷ್ಟಿಕರವಾದ ಆಹಾರ ಸಿಕ್ಕುತ್ತಿದೆಯೇ ಇಲ್ಲವೇ ಎಂದು ಯಾರೂ ನೋಡುತ್ತಿಲ್ಲ. ನಿಮ್ಮ ಸಂಶೋಧಕರು ಹೋಗಿ ಇಂಥ ಭೂಮಿಯಲ್ಲಿ ರೇಷ್ಮೆ ಬೆಳೆಯಬಹುದೇ ಇಲ್ಲವೇ ಎಂದು ಎಂದೂ ಪರೀಕ್ಷೆಮಾಡಿಲ್ಲ. ಈ ಹೊತ್ತು ಎಲ್ಲಿಯಾದರೂ ಒಂದುಕಡೆ ಸ್ವಲ್ಪ ರೇಷ್ಮೆಯ ಬೆಲೆ ಜಾಸ್ತಿಯಾಯಿತೆಂದರೆ, ಒಡನೆಯೇ ಎಲ್ಲರೂ ಯಾವುದನ್ನೂ ನೋಡದೆ ಹಿಪ್ಪುನೇರಳೆಯನ್ನು ಬೆಳೆಯುವುದಕ್ಕೆ ಷುರುಮಾಡಿಬಿಡುತ್ತಾರೆ ಅಷ್ಟೆ. ಈಗ ಎರಡು ವರ್ಷದಿಂದ ಸಾಮಾನ್ಯವಾಗಿ ಬೆಲೆ ಒಂದೇರೀತಿ ಇರುವುದರಿಂದ ಅನೇಕ ಕಡೆ ಸಾಲುಕಡ್ಡಿ ಕೀಳುತ್ತಿದ್ದಾರೆ. ಅನೇಕ ಮಹನೀಯರು ಹಳ್ಳಿಗಳಲ್ಲಿ ಜಮೀನಿಟ್ಟುಕೊಂಡಿರುವವರು ಹಳ್ಳಿಗಳಿಗೆ ಬಂದು ರೇಷ್ಮೆ ಕಡ್ಡಿ ಹಾಕಿಸುತ್ತಿದ್ದಾರೆ. ಮಾರ್ಕೆಟ್ಟಿನಲ್ಲಿ ಸ್ವಲ್ಪ ತೇಜಿ ಇರುವುದೇ ಇದಕ್ಕೆ ಕಾರಣ. ಏನಾದರೂ ಫಲ ಬರುವುದು ಕಡಮೆ ಆಯಿತೆಂದರೆ ಇವರು ಯಾರೂ ಅತ್ತಕಡೆಯೇ ನೋಡುವುದಿಲ್ಲ. ಉದಾಹರಣೆಗೆ, ಗ್ರಾಫ್ಟ್ ಜಾತಿಯನ್ನು ಮೊದಲು ಷುರುಮಾಡಿದಾಗ ನಿಜವಾದ ರೈತರಿಗಿಂತ ಮುಂಚಿತವಾಗಿ ಓದುವ ಹುಡುಗರು, ಯಾವತ್ತೂ absentee landlords ಆಗಿದ್ದವರು ಹೋಗಿ ರೇಷ್ಮೆ ಕಡ್ಡಿ ಹಾಕುವುದಕ್ಕೆ ಪ್ರಾರಂಭಿಸಿದರು. ಹಿಂದೆ ಒಬ್ಬರು ಸಚಿವರಾಗಿದ್ದವರು, ಈ ಉತ್ಸಾಹದಲ್ಲಿ 15,000 ಗಿಡಹಾಕಿಸಿಬಿಟ್ಟರು. ಆದರೆ ಕೊನೆಗೆ ನಿರೀಕ್ಷಿಸಿದಷ್ಟು ಫಲ ಅವರಿಗೆ ಎಂದು ಕಾಣಿಸಲಿಲ್ಲವೋ ಅಂದು, ಗಿಡಕ್ಕೆ ಒಂದು ರೂಪಾಯಿನಂತೆ ಕೊಟ್ಟು ಹಾಕಿಸಿದಂಥಾದ್ದನ್ನು ಒಮ್ಮೆಲೇ ಕಿತ್ತುಹಾಕಿಸಿದರು. ಹೀಗೆ ಮಾಡಿದ್ದು ಏಕೆ ? ಸರ್ಕಾರದಮೇಲೆ ಅವರಿಗೆ ನಂಬಿಕೆಯಿಲ್ಲವೆಂದಲ್ಲವೇ ? ಅಂಥ ಸಚಿವರಿಗೇ ನಂಬಿಕೆಯಿಲ್ಲದಂಥಾದ್ದನ್ನು ರೈತರಮೇಲೆ ಹೇಗೆ ಹೊರಿಸುತ್ತೀರಿ ?

ಮುಖ್ಯವಾಗಿ ಒಂದು ವಿಷಯವನ್ನು ಗಮನಿಸಬೇಕು. ಸುಮ್ಮನೆ ಎಲ್ಲರೂ ಈ ರೀತಿ ವ್ಯವಸಾಯಮಾಡುವುದರಿಂದ ಪ್ರಯೋಜನವಿಲ್ಲ. ಯಾರಿಗೆ ಈ ವ್ಯವಸಾಯದಲ್ಲಿ ನಂಬಿಕೆಯಿಲ್ಲವೋ ಅಂಥವರು ಇದಕ್ಕೆ ಕೈಹಾಕಲೇ ಕೂಡದು. ಅನುಭವವಿಲ್ಲದವರು ಕೈಹಾಕಿದರೆ ನಷ್ಟ ಹೊಂದುವುದು ಸಹಜ. ಉದಾಹರಣೆಗೆ ನಾನು ಇದನ್ನೇ ಈಗಿನ ಡೈರೆಕ್ಟರು ಯಾವತ್ತು ಚಾರ್ಜ್ ತೆಗೆದುಕೊಂಡರೋ ಅಂದು ತೆಗೆದುಕೊಂಡು ಹಾಕಿಸಿದ್ದೇನೆ. . . . . .

ಶ್ರೀ ಟಿ. ಮರಿಯಪ್ಪ.—ಎಷ್ಟು ಎಕರೆಗೆ ಹಾಕಿಸಿದ್ದೀರಿ ?

ಶ್ರೀ ಎಸ್. ಆರ್. ರಾಮಯ್ಯ.—ಅವರು ಕೊಟ್ಟದ್ದೇ ಅರ್ಧ ಎಕರೆಗೆ, ಅಷ್ಟೂ ಹಾಕಿಸಿದ್ದೇನೆ. ನನಗಂತೂ ನಷ್ಟವಾಗಿಲ್ಲ. ನಷ್ಟವಾಗಿಲ್ಲ, ಏಕೆಂದರೆ, ಇದು ನನ್ನ ಕಸಬು. ನಾನು ಹೆಚ್ಚಿಗೆ ಬಂಡವಾಳ ಹಾಕಿ ಕಳೆದುಕೊಳ್ಳುತ್ತೇನೆ ಎಂದು ಭಯಪಡಬೇಕಾಗಿಲ್ಲ.

ಶ್ರೀ ಜಿ. ವೆಂಕಟಪ್ಪ.—ಹಿಂದಿದ್ದ ಒಬ್ಬ ಮಂತ್ರಿಗಳು 15,000 ಗಿಡಗಳನ್ನು ನಡಿಸಿದವರು ಒಂದೇ ದಿನ ಎಲ್ಲವನ್ನು ಕಿತ್ತುಹಾಕಿಸಿದರು ಎಂದು ಮಾನ್ಯಸದಸ್ಯರು ಹೇಳಿದರು. ಇದಕ್ಕೆ ಕಾರಣ ಅವರಿಗೆ ನಷ್ಟವಾದುದು ಎಂದು ಹೇಳಿದರು. ಆದರೆ ಅದು ಸರಿಯಲ್ಲ. ಅವರಿಗೆ ಆದ ಅನುಭವವೇ ಬೇರೆ. ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಹೋಗಿ "ನಾನು ಬಿತ್ತನೆಗಾಗಿಯೇ ಬೆಳೆಸುತ್ತಿರುವುದು ; ನನಗೆ ಬೆಲೆಯ ಸೆಕ್ಯೂರಿಟಿ ಕೊಡಿ" ಎಂದು ಕೇಳಿದಕ್ಕೆ ಅವರು ನಿರಾಕರಿಸಿದ ಕಾರಣದ ಮೇಲೆ ಕೋಪಗೊಂಡು ಒಂದೇ ದಿವಸ ಕಿತ್ತುಹಾಕಿಸಿದರು.

11-30 A.M.

ಶ್ರೀ ಎಸ್. ಆರ್. ರಾಮಯ್ಯ.—ಈಗ ನನ್ನ ಮಾನ್ಯ ಮಿತ್ರರು ಹೇಳಿದಹಾಗೆ ಒಂದು ಪೈಪೋಟಿಗೋಸ್ಕರ ಇಷ್ಟು ಹಣವನ್ನು ವ್ಯಯಮಾಡುವುದು ಸರಿಯಲ್ಲ. ಮಂತ್ರಿಗಳಾಗಿದ್ದುಕೊಂಡಿರುವವರೇ ಈ ರೀತಿಯಾಗಿ 12 ಸಾವಿರ ರೂಪಾಯಿಗಳ ಬೆಲೆಯಾಗುವಷ್ಟು ಬೆಳೆಯನ್ನು ಹಾಳುಮಾಡುವುದಕ್ಕೆ ಅವಕಾಶವನ್ನುಂಟುಮಾಡಿದ್ದಾರೆಂದು ಹೇಳುವುದನ್ನು ನಿಜ

(ಶ್ರೀ ಎಸ್. ಆರ್. ರಾಮಯ್ಯ)

ವಾಗಿ ಯೋಚನೆ ಮಾಡಬೇಕು. ಈ ರೀತಿಯಾದರೆ ರೈತರ ಪಾಡೇನಾಗುತ್ತದೆಂಬುದನ್ನು ಸರ್ಕಾರ ತೀವ್ರವಾಗಿ ಯೋಚನೆಮಾಡಬೇಕು. ಮೊದಲು ಈ ಬೆಳೆ ಚೆನ್ನಾಗಿ ಬರುತ್ತಿತ್ತೆಂದು ಮಾನ್ಯ ಮಿತ್ರರು ಹೇಳಿ ರೇಷ್ಮೆ ವಿಷಯದಲ್ಲಿ ಬಹಳ ಮಾಹಿತಿ ಕೊಟ್ಟಿದ್ದಾರೆ. ಬೆಳೆ ತೆಗೆಯುವಾಗ ಭೂಮಿಯ ಪರಿಸ್ಥಿತಿ ಯಾವರೀತಿ ಇರುತ್ತದೆಂಬ ವಿಷಯವನ್ನು ಮುಂದೆ ಹೇಳುತ್ತೇನೆ. ಅನೇಕ ರೈತರು ಈ ಒಂದು ಆಕರ್ಷಣೀಯವಾದ ಬೆಳೆಯನ್ನು ಈಗ ಹಾಕುತ್ತಾರೆ. ಆಬ್‌ಸೆಂಟಿ ಲ್ಯಾಂಡ್ ಲಾರ್ಡ್ಸ್ ಈ ಬೆಳೆ ಹಾಕಿದರೂ ರೇಷ್ಮೆ ಸೊಪ್ಪು ಬರುವ ಕಾಲದಲ್ಲಿ ಅದಕ್ಕೆ ಕೈಹಾಕುವುದಕ್ಕೆ ಅವರಿಗೆ ಅಷ್ಟಾಗಿ ತಿಳುವಳಿಕೆ ಇರುವುದಿಲ್ಲ. ಈ ಒಂದು ಕೈಗಾರಿಕೆಯಿಂದ ಸಾವಿರಾರು ಜನಗಳಿಗೆ ಉದ್ಯೋಗಗಳನ್ನು ಕಲ್ಪಿಸಬಹುದು. ಆದರೆ ಈ ಉದ್ಯೋಗಕ್ಕೆ ತಕ್ಕ ಅನುಭವಸ್ಥರನ್ನೂ ನಿಷ್ಠೆಯಿಂದ ಕೆಲಸಮಾಡುವ ಜನರನ್ನೂ ಒದಗಿಸಬೇಕಾದರೆ ಬಹಳ ಕಷ್ಟವಾಗುತ್ತದೆ. ಇಲ್ಲಿ ಕೂತುಕೊಂಡು ಅಲ್ಲಿ ಈ ವ್ಯವಸಾಯ ಮಾಡುತ್ತೇವೆಂದು ಹೇಳಿದರೆ ಯಾವತ್ತೂ ಈ ವ್ಯವಸಾಯ ಬೆಳೆಯುವುದಿಲ್ಲ. ನನ್ನ ಕ್ಷೇತ್ರದಲ್ಲಿ ಮೂರು ನಾಲ್ಕು ಜನ ಹೀಗೆ ಬಂದು ಬೆಳೆ ಮಾಡಿದರು. ಶ್ರೇಷ್ಠವಾದ ಭೂಮಿ. ಅಲ್ಲಿ ಚೆನ್ನಾಗಿ ಬೆಳೆ ಬಂತು. ಆದರೆ ಬೆಳೆ ತೆಗೆಯುವಕಾಲಕ್ಕೆ ಕುಳಿತು ಬೆಳೆ ತೆಗೆಯುವ ಸಾಮರ್ಥ್ಯವಿರಲಿಲ್ಲ. ಅದನ್ನು ಕೈ ಬಿಟ್ಟಿದ್ದಾರೆ ಮತ್ತು ಲಾಭ ಬರುವುದೂ ಸಿಕ್ಕಲಿಲ್ಲ. ಯಾವಾಗ ಲಾಭ ಸಿಕ್ಕಲಿಪೊಲ್ಲೋ ಈ ಬೆಳೆ ಬೆಳೆಯುವುದನ್ನು ಕೂಡ ನಿಲ್ಲಿಸಿಬಿಟ್ಟರು. ಇದರಿಂದ ಹಿಪ್ಪುನೇರಳೆ ಸೊಪ್ಪಿನ ಬೆಳೆ ತೆಗೆಯುವುದಕ್ಕೆ ಇವರಿಗೆ ಸಾಧ್ಯವೇ ಇಲ್ಲವೆಂದು ಹೇಳಬಹುದು. ಇದರಲ್ಲಿ ನಿರತರಾಗಿರುವವರು ಎಷ್ಟು ಕಷ್ಟ ಪಡುತ್ತಾರೆ, ಯಾವರೀತಿ ಆ ಉದ್ಯೋಗದಲ್ಲಿ ತೊಡಗಿದ್ದಾರೆಂಬುದನ್ನು ನೋಡಬೇಕು. ಒಂದು ಸಣ್ಣ ಮೊಟ್ಟೆಯನ್ನು ಮರಿಮಾಡಿಸಬೇಕಾದರೆ ನಿಜವಾಗಿ ಬಹಳ ಶ್ರದ್ಧೆಯಿಂದ ಕೆಲಸ ಮಾಡಬೇಕು. ಸುಮಾರು ಒಂದು ಗಂಟೆ ಸ್ವಲ್ಪ ಬಿಸಿಲು ಆ ಮೊಟ್ಟೆಗೆ ಬಿದ್ದರೆ ಈ ಬೆಳೆಯೇ ಆಗುವುದಿಲ್ಲ. ಅಕಸ್ಮಾತ್ ಏನಾದರೂ ಅದಕ್ಕೆ ರೋಗ ಬಿತ್ತು ಎಂದರೆ ಬಿಸಿಲಿಗೆ ಈ ಬೆಳೆಯೇ ಕೆಟ್ಟು ಹೋಗುತ್ತದೆ. ಆದ್ದರಿಂದ ಮರಿ ಮಾಡಿಸುವಾಗ ನಿಜವಾಗಿ ಬಹಳ ಶ್ರದ್ಧೆಯಿಂದ ಕೆಲಸ ಮಾಡಬೇಕು. ಕೊನೆಗೆ ಹೆಚ್ಚು ಕಡಿಮೆ ಗಾಳಿ ವ್ಯತ್ಯಾಸವಾದರೆ ಏನುಮಾಡಿದರೂ ಆ ಬೆಳೆ ಸಿಕ್ಕುವುದಿಲ್ಲ. ಅದು ಎಷ್ಟು ಸೂಕ್ಷ್ಮವಾದ ಬೆಳೆಯೆಂಬುದನ್ನು ಯೋಚನೆ ಮಾಡಬೇಕು. ಅದನ್ನು ಬೆಳೆಯುವ ರೈತನ ಮನೆ ಎಷ್ಟು ಚೊಕ್ಕಟವಾಗಿರುತ್ತದೆ, ಜನ ಅದರಕಡೆ ಯಾವರೀತಿ ನಿಗಾ ಇಟ್ಟಿದ್ದಾರೆಂಬುದನ್ನು ಯೋಚನೆಮಾಡಬೇಕು. ಈ ಬೆಳೆಯನ್ನು ಮಾಡುವ ಕಾಲಕ್ಕೆ ಬಹಳ ಕಷ್ಟವಿರುತ್ತದೆ. ಮೊಟ್ಟೆ ಒಡೆದು ಮರಿಮಾಡಿದ ಮೂರುದಿವಸಗಳು ಪ್ರತಿ ಗಂಟೆಗೂ ಅದರ ಗಾತ್ರ, ಅದರ ಸ್ವರೂಪಕ್ಕೆ ತಕ್ಕ ಹಾಗೆ ಸೊಪ್ಪನ್ನು ಹಾಕಬೇಕು. ಮೂರುದಿವಸಗಳೂ ಪ್ರತಿ ಗಂಟೆಯಲ್ಲೂ ಅದನ್ನು ಒಳ್ಳೆಯವಾತಾವರಣದಲ್ಲಿ ಇಟ್ಟುಕೊಂಡಿರಬೇಕಾಗುತ್ತದೆ, ಬೆಳೆ ಬರುವಕಾಲದಲ್ಲಿ ರೈತನ ಆಗು ಹೋಗುಗಳು ಅವನ ಬೆಳೆಯ ಮೂಲದಲ್ಲಿಯೇ ಗೊತ್ತಾಗುತ್ತವೆ. ಅವನು ಈ ಬೆಳೆಯನ್ನು ಒಂದು ಕ್ರಮದಿಂದ ಬೆಳೆಯುತ್ತಾನೆ. ಆದ್ದರಿಂದಲೇ ಬೆಳೆ ನಿಜವಾಗಿ ಸಿಕ್ಕುತ್ತೆ ಎನ್ನುವ ಧೈರ್ಯ ಅವನಿಗೆ ಬರುತ್ತದೆ. ಆದರೆ ಇದನ್ನು ಸರ್ಕಾರದವರು ನಾವೇ ಈ ಬೆಳೆಯನ್ನುಮಾಡಿಸುತ್ತೇವೆಂದು ಯೋಚನೆ ಮಾಡುವುದಕ್ಕೇ ಖಂಡಿತ ಸಾಧ್ಯವಿಲ್ಲ. ಅಥವಾ ನಾವೇ ಮಾಡುತ್ತೇವೆಂದು ಅವರು ಹೇಳುವುದಕ್ಕೂ ಸಾಧ್ಯವಿಲ್ಲ. ಈ ವ್ಯವಸಾಯವನ್ನು ಮಾಡುವವರು ರೇಷ್ಮೆ ಹುಳು ತಿನ್ನುವ ಸೊಪ್ಪನ್ನು ವ್ಯವಸ್ಥೆ ಮಾಡಬೇಕಾದರೆ ಮೂರುದಿವಸಗಳು ಕಣ್ಣಿಗೆ ಎಣ್ಣೆ ಹಾಕಿಕೊಂಡು ನಿದ್ರೆ ಕೆಟ್ಟು ಹಾಕಬೇಕಾಗಿದೆ. ಮನುಷ್ಯನಿಗೆ ಏನಾದರೂ ಕಾಯಿಲೆ ಬಂದರೆ ಯಾವುದಾದರೂ ಇಂಜಕ್ಷನ್ ಮತ್ತೊಂದು ಮಗದೊಂದು ಕೊಟ್ಟು ಆ ರೋಗವನ್ನು ವಾಸಿಮಾಡಿ ಕೊಳ್ಳಬಹುದು. ಆದರೆ ಈ ರೋಗಕ್ಕೆ ನಿಜವಾದ ಡಾಕ್ಟರ್ ಶ್ರದ್ಧೆಯಿಂದ ಈ ಬೆಳೆಯನ್ನು ಬೆಳೆಯತಕ್ಕ ಮನುಷ್ಯ ಮತ್ತು ಈ ಬೆಳೆಯಲ್ಲಿ ಸಾಕಷ್ಟು ಅನುಭವವಿರತಕ್ಕ ಮನುಷ್ಯ. ಅವನು ಸರಿಯಾಗಿ ಬೆಳೆಮಾಡಿದರೆ ಅದು ಉತ್ತಮ ಬೆಳೆಯಾಗುತ್ತದೆ. ಮುಂದೆ ರೇಷ್ಮೆಯನ್ನೂ ಸಹ ನೋಡುತ್ತಾನೆ. ಅದಕ್ಕಾಗಿ ಎಷ್ಟೋ ಸೆಂಟರುಗಳನ್ನು ಸಹ ಸರ್ಕಾರದವರು ಈಗ ತೆರೆಯಬೇಕೆಂದು ಹೊರಟಿದ್ದಾರೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಜಾಗ್ರತೆ ಕ್ರಮ ತೆಗೆದುಕೊಳ್ಳುವುದು ನನಗೆ ಬಲು ಸಂತೋಷ. ಖಂಡಿತವಾಗಿ ಇದು ಯಶಸ್ವಿಯಾಗುತ್ತದೆಂದು ನಾನು ಹೇಳುತ್ತೇನೆ. ಆದರೆ ಈ ವಾತಾವರಣಕ್ಕೆ ಅನುಕೂಲವಾದ ವಸತಿ ಸೌಕರ್ಯ ರೈತರಿಗೆ ಸಕಾಲದಲ್ಲಿ ಒದಗುತ್ತಿಲ್ಲ. ರೈತನಿಗೆ ಕುರಿ, ಕೋಳಿ ಸಾಕಿಕೊಳ್ಳುವುದಕ್ಕೂ, ಅಡಿಗೆಮಾಡಿ ಕೊಳ್ಳುವುದಕ್ಕೂ ವಸತಿ ಸೌಕರ್ಯವಿರಬೇಕು. ಈ ಮಧ್ಯೆ ಅವರು ರೇಷ್ಮೆ ಹುಳುವಿನ ಮರಿಗಳನ್ನು ಸಾಕಬೇಕೆಂದು ಹೇಳಿದರೂ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಸೆಂಟರುಗಳನ್ನು ಒಂದೇ ಕಡೇ ಮಾಡಿ ಶ್ರದ್ಧೆಯಿಂದ ಕೆಲಸ ಮಾಡಿದರೆ ಈ ಬೆಳೆ ಯಶಸ್ವಿಯಾಗುತ್ತದೆ. ಆದರೆ ರೈತರು ಒಂದೊಂದುಸಾರಿ ಎರಡು ಸಾವಿರ ಮೂರು ಸಾವಿರ ಮೊಟ್ಟೆಗಳನ್ನು ಅಲ್ಲಿಂದ ತರುತ್ತಾರೆ. ಆದರೆ ಸೊಪ್ಪು ಒಂದೇ ವಿಧವಾಗಿರುವುದಿಲ್ಲ. ಒಂದು ತೋಟದಲ್ಲಿ ಗೊಬ್ಬರಹಾಕಿ ಈ ಬೆಳೆಯನ್ನು ಬೆಳೆಯುತ್ತಾರೆ, ಮತ್ತೊಂದು ತೋಟದಲ್ಲಿ ಫರ್ಟಿಲೈಜರ್ಸ್ ಉಪಯೋಗಿಸುತ್ತಾರೆ. ಆದ್ದರಿಂದ ಈ ಬೆಳೆ ಸೂಕ್ಷ್ಮವಾದುದು ಒಂದಕ್ಕೊಂದು ಹೋಲುವುದಿಲ್ಲ. ಒಂದರಲ್ಲಿ ಬೆಳೆ ಚೆನ್ನಾಗಿ ಬರುತ್ತದೆ. ಇನ್ನೊಂದರಲ್ಲಿ ಕೆಟ್ಟು ಹೋಗುತ್ತದೆ. ಆದ್ದರಿಂದಲೇ ಈ ಬೆಳೆಯನ್ನು ಬೆಳೆಯುವವರಿಗೆ ಸಾಕಾದಷ್ಟು ವಿದ್ಯಾಭ್ಯಾಸ ಟ್ರೈನಿಂಗ್ ಅತ್ಯಾವಶ್ಯಕ. ಬೆಳೆ ಕೆಟ್ಟುಹೋಗುವುದಕ್ಕೆ ಮುಂಚೆಯೇ ಇದಕ್ಕೆ ತಕ್ಕಂತೆ ಸೊಪ್ಪಿನ ಬೆಳೆಯಾಗುತ್ತದೆಯೇ ಎಂಬುದನ್ನು ಯೋಚನೆ ಮಾಡುವುದಿಲ್ಲ. ಅನುಭವ ಬಂದಮೇಲೆ ಬೆಳೆಕೆಟ್ಟು ಹೋಯಿತು ಎಂದು ಆಗ ಯೋಚನೆ ಮಾಡುತ್ತಾರೆಯೇ ವಿನಹ ಬೆಳೆಗೆ ಮುಂಚೆಯೇ ರೈತರು ಅಷ್ಟು ತೀವ್ರವಾಗಿ ಯೋಚನೆಯಾಡುವುದಿಲ್ಲ. ಆದ್ದರಿಂದ ಇಲಾಖೆಯವರು ಇದಕ್ಕೆ ಹೆಚ್ಚಿನ ಗಮನ ಕೊಡಬೇಕು ಈಗ ಅಲ್ಲಲ್ಲಿ ಒಬ್ಬೊಬ್ಬ ಅಧಿಕಾರಿಯನ್ನು ನೇಮಿಸಿರುತ್ತಾರೆ. ಅವರು ಸಾಮಾನ್ಯವಾಗಿ ಆ ಸೊಪ್ಪನ್ನು ನೋಡಿ ಇದನ್ನು ಎಲ್ಲಿಂದ ತಂದುದು, ಎಂದು ಕೇಳಿ ಬರೆದು ಕೊಂಡು ಬಿಡುತ್ತಾರೆ. ಸೊಪ್ಪು ಹೇಗಿದೆ ಎಂಬುದಾಗಿಯೂ ಸಹ ಯೋಚನೆ ಮಾಡುವುದಿಲ್ಲ. ಸುಮ್ಮನೆ ಯಾವುದೋ ಚೆರೆ ಬರೆದುಕೊಂಡುಹೋಗಿ ವರದಿ ಒಪ್ಪಿಸುತ್ತಾರೆ. ಈಗ ಏಡೆಡ್ ಗ್ರ್ಯಾನ್ಯುಯರ್ಸ್ ಸ್ಕೀಂನಿಂದ ಒಂದು ಬೋನಸ್

ಬೇರೆ ಸಿಕ್ಕುತ್ತದೆ. ಅವರಿಗೆ ಲೆಖ್ಖ ಕೊಡುವುದಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಕೊಡುತ್ತಾರೆ. ಹೀಗೆ ಕೆಲವರ ಒಳಸಂಚಿಗೆ ಸಿಕ್ಕಿಕೊಂಡು ರೈತನು ಬೆಳೆ ಬೆಳೆಯುತ್ತಾನೆ. ಅವನ ಕಷ್ಟ ಸುಖಗಳೇನೆಂಬುದನ್ನು ಸರ್ಕಾರಕ್ಕೆ ಅಧಿಕಾರಿಗಳು ಮುಟ್ಟಿಸುತ್ತಾ ಇಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಅಧಿಕಾರಿವರ್ಗದ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ನಿಗಾ ಕೊಡಬೇಕು. ಈ ವಿಚಾರದಲ್ಲಿ ಉತ್ತರ ಕೊಡಬೇಕು. ಇದಕ್ಕೆ ವ್ಯವಸ್ಥೆ ಮಾಡದೆ ಬೆಳೆ ಕೆಡುವುದಕ್ಕೆ ನೀವು ಕಾರಣರಾಗುತ್ತೀರಿ ಎಂದು ಹೇಳುತ್ತೇನೆ. ಅಷ್ಟಕ್ಕೆ ಮುಗಿಯುತ್ತಿಲ್ಲ. ಬಿತ್ತನೆ ಗೂಡುಗಳನ್ನು ಕೊಳ್ಳೆಗಾಲ, ದೊಡ್ಡಬಳ್ಳಾಪುರ ಮತ್ತು ಕುಣಿಗಲ್ ಈ ಊರುಗಳಲ್ಲಿ ವ್ಯವಸ್ಥೆ ಮಾಡಿದ್ದೀರಿ. ಅಲ್ಲಿಂದ ತರುವುದಕ್ಕೆ ಅನೇಕ ಕಷ್ಟಗಳಿವೆ. ಇವೊತ್ತಿನ ದಿವಸ ಅನೇಕರು ನೀರು ಹಾಕಿ ಬೆಳೆ ತೆಗೆಯುತ್ತಾರೆ. ಕೆಲವರು ಮಳೆಬಿದ್ದರೆ ತೆಗೆಯುತ್ತಾರೆ. ಮಳೆ ಇಲ್ಲದೆ ಇದ್ದರೆ ಒಣಗಿದ ಸೊಪ್ಪುಹಾಕಿ ಬೆಳೆ ತೆಗೆಯುತ್ತಾರೆ. ಕೆಲವು ಹುಳುಗಳಿಗೆ ಚೆನ್ನಾಗಿ ನೀರು ಕಟ್ಟಿ ಸೊಪ್ಪು ಹಾಕಿದರೆ ವಾತಾವರಣ ಸರಿಹೋಗುವುದಿಲ್ಲ. ಇದು ದೊಡ್ಡ ತೊಂದರೆ. ಹಾಗೆಯೇ ಬಸ್ಸಿನಲ್ಲಿ ಓವರ್ ಲೋಡ್ ಹಾಕಿರುತ್ತಾರೆ. ಅದರ ಮಧ್ಯೆ ಗೂಡು ಹಾಕಿರುತ್ತಾರೆ. ಇಂತಹ ಗೂಡಿನಲ್ಲಿ ಮೊಟ್ಟೆ ತಯಾರು ಮಾಡುತ್ತಾರೆ.

ಅನೇಕ ಸಂದರ್ಭದಲ್ಲಿ ಬೆಳೆ ಅಗುವ ಸಂದರ್ಭದಲ್ಲಿ ಕೆಟ್ಟು ಹೋಗುತ್ತದೆ. ಮೊಟ್ಟೆಸಿಕ್ಕಿದರೆ ಸಾಕು ಎನ್ನುವ ಜಾಡ್ಯದಲ್ಲಿ ಅನೇಕರು ಮೊಟ್ಟೆ ತೆಗೆದುಕೊಂಡು ಬರುತ್ತಾರೆ. ಅದರಿಂದ ಅನೇಕ ತೊಂದರೆಗಳು ಬರುತ್ತವೆ. ಬಸ್ಸಿನಲ್ಲಿ ಬಿಸಿಲಿನಲ್ಲಿ ಹಾಕಿರುತ್ತಾರೆ. ಅದನ್ನು ತೆಗೆದು ಕೊಂಡು ಹೋಗಿ ಮೊಟ್ಟೆ ಮಾಡುತ್ತಾರೆ. ಈ ಕೈಗಾರಿಕೆಗೆ ಇಲಾಖೆಯವರೂ ಅನೇಕ ಸಬ್ಸಿಡಿ ಕೊಡುತ್ತಾರೆ. ಈ ಗ್ರೇನೇಜಿನವರು ಗೂಡುಗಳನ್ನು ಸುರಕ್ಷಿತವಾಗಿ ತಂದು ಪ್ರತಿಯೊಬ್ಬರಿಗೂ ಹಂಚುವ ವ್ಯವಸ್ಥೆ ಏತಕ್ಕೆ ಮಾಡಬಾರದು ? ಕೆಲವು ರೇಷ್ಮೆ ಹುಳು ಸಾಕುವವರನ್ನು ಸೀಡ್ ರೇರರ್ಸ್ ಮಾಡಿಕೊಂಡಿರುತ್ತಾರೆ. ಈ ಸೀಡ್ ರೇರರ್ಸ್ ಬೆಳೆದದ್ದನ್ನು ಫಾರಮ್ಮಿಗೆ ಕೊಡಬೇಕು ಎಂದು ಒಂದು ಕಂಡೀಷನ್ಸ್ ಹಾಕಿಕೊಂಡಿರುತ್ತಾರೆ. ಬೆಳೆ ಇಲ್ಲದೆ ಇದ್ದರೆ ಗತಿಏನು ? ಆ ವಿಷಯವನ್ನು ಶ್ರೀ ವೆಂಕಟಪ್ಪನವರು ಚೆನ್ನಾಗಿ. ಹೇಳಿದರು. ಗೂಡು ಬಣ್ಣ ಕೆಟ್ಟು ಹೋಯಿತು ಎಂದರೆ ರೇಷ್ಮೆ ತೆಗೆದುಕೊಳ್ಳುವವರು ದುಡ್ಡು ಕೊಡುವುದಿಲ್ಲ, ತೆಗೆದುಕೊಳ್ಳುವುದಿಲ್ಲ. ರೇಷ್ಮೆಗೆ ಸಾಕಾದಷ್ಟು ಬೆಲೆ ಕೊಡುವುದಿಲ್ಲ. ಇದ್ದ ಕಡೆ ಮಾಲು ಕೊಳ್ಳುವಹಾಗಿಲ್ಲ. ಆದ್ದರಿಂವ ಸರಿಯಾದ ಬೆಲೆ ಸಿಕ್ಕುವುದಿಲ್ಲ. ಬೇರೆಯುವನು ದುಡ್ಡು ಸಂಪಾದಿಸುತ್ತಾ ಇರುವಾಗ ನನಗೆ ದುಡ್ಡು ಬಾರದೆ ಇದ್ದರೆ ನಾನು ಎಷ್ಟರಮಟ್ಟಿಗೆ ಮುಂದುವರಿಯಬಹುದು ಎಂಬುದನ್ನು ಯೋಚನೆಮಾಡಬೇಕು. ಸೀಡ್ ರೇರರ್ಸ್ ಕಂಡೀಷನ್ಸ್ ಹಾಕಿಕೊಂಡು ಇಷ್ಟೇ ಕೊಡಬೇಕು ಎಂದು ಒತ್ತಾಯಮಾಡಿ ಎಲ್ಲಾ ಕಂಡೀಷನ್ಸ್ ಮಾಡಿಕೊಡಿ ಎಂದು ಕೇಳುವ ಜನ ಅದಕ್ಕೆ ತಕ್ಕ ರಕ್ಷಣೆ ಕೊಡ ಬೇಡವೇ ! ಸೀಡ್ ಕಂಟ್ರೋಲ್ ಆಕ್ಟ್ ತಂದಿದ್ದಾರೆ. ಒಂದು ಏರಿಯಾ ಮಾಡಿಕೊಂಡು ಕೆಲವರ ಹತ್ತಿರ ತೆಗೆದುಕೊಳ್ಳಬೇಕು ಎಂದು ಕಡ್ಡಾಯವಾದ ವ್ಯವಸ್ಥೆ ಮಾಡಿರುವಾಗ ಅದರ ಹಿಂದೆ ಇನ್ನೊಂದು ವ್ಯವಸ್ಥೆಮಾಡಬೇಕು. ಬೆಳೆ ಕೆಟ್ಟು ಹೋದರೆ ಕಾಂಪೆನ್‌ಸೇಷನ್ ಕಟ್ಟಿಕೊಡುವುದಕ್ಕೆ ತಯಾರಾಗಿದ್ದಾರೆಯೇ ? ಅವರು ಕಟ್ಟಿಕೊಡದಿದ್ದರೆ ಸರ್ಕಾರದವರು ಕಟ್ಟಿಕೊಡಬೇಕು. ಈ ಒಂದು ವ್ಯವಸ್ಥೆ ಸರಿಹೋದರೆ ತೆಗೆದುಕೊಳ್ಳುವವರಿಗೂ ಗ್ಯಾರೆಂಟಿ ಆಗುತ್ತದೆ. ಬೆಳೆಯುವವನಿಗೂ ಗ್ಯಾರೆಂಟಿ ಆಗುತ್ತದೆ. ಉತ್ತಮವಾದ ಬೆಳೆಮಾಡಬೇಕು ಎನ್ನುವ ಆಕಾಂಕ್ಷೆ ರೈತರಲ್ಲಿ ಬರುತ್ತದೆ. ಆದ್ದರಿಂದ ಅದಕ್ಕೆ ತಕ್ಕಂಥ ವಾತಾವರಣವನ್ನು ಕಲ್ಪಿಸಬೇಕು. ಹೀಗೆ ನಾನಾ ರೂಪದಲ್ಲಿ ರೇಷ್ಮೆಯ ಮೂಲ ತಳಹದಿ ಸರಿಮಾಡಬೇಕು. ಇಲ್ಲದಿದ್ದರೆ ರೇಷ್ಮೆ ತಯಾರಾಗುವುದಿಲ್ಲ. ಕೇಂದ್ರದಿಂದ ರಕ್ಷಣೆ ಬರುವುದಿಲ್ಲ. ಮೂಲದಲ್ಲಿರುವ ತೊಂದರೆಯನ್ನು ಪರಿಹಾರ ಮಾಡುವುದಕ್ಕೆ ತೀವ್ರವಾದ ಗಮನ ಕೊಡಬೇಕು. ಇವೊತ್ತಿನ ದಿವಸ ಕೊನೆಯ ಪಕ್ಷ ಹೋಬಳಿಗೆ ಒಂದೊಂದು ಗ್ರೈನ್ಯೂರ್ಸ್ ಮಾಡಬೇಕು. ಇವೊತ್ತು ರೇಷ್ಮೆ ವ್ಯವಸಾಯಕ್ಕೆ ಸರ್ಕಾರದ ಪ್ರೋತ್ಸಾಹ ಕೊಡುತ್ತಿದ್ದೀರಿ ಎಂದು ಕೇಳುತ್ತಿದ್ದೇವೆ. ಬೇಕಾದಷ್ಟು ಕೇಂದ್ರದಿಂದ ಹಣ ಬರುತ್ತಿದೆ. ಸೆಂಟ್ರಲ್ ಸಿಲ್ಕ್ ಬೋರ್ಡಿನಿಂದಲೂ ಹಣ ಬರುತ್ತಿದೆ. ಏನು ಕಾರಣಾಂತರದಿಂದಲೋ ಗೊತ್ತಿಲ್ಲ ಅದು ಲ್ಯಾಪ್ಸ್ ಆಗುತ್ತಿದೆ. ಹೀಗಾಗಿ ರೈತನಿಗೆ ಸಾಕಾದಷ್ಟು ಪ್ರೋತ್ಸಾಹ ಮುಟ್ಟುತ್ತಿಲ್ಲ. ಉದಾಹರಣೆಗೆ ಹೇಳಬೇಕಾದರೆ ಏಡೆಡ್ ಗ್ರೇನೇಜಸ್ ಮನೆಕಟ್ಟಿ ಕೊಡುವ ವಿಚಾರ ಈಗ ಮೂರು ವರ್ಷಗಳಿಂದಲೂ, ನಡೆಯುತ್ತಿದೆ. ಒಂದು ಕಡೆ ಏಡೆಡ್ ಗ್ರೇನ್ಯೂರ್ ಅಸೋಷಿಯೇಷನ್ ಸಲಹೆ ಕೇಳುತ್ತಿದ್ದೇವೆಂದು ಹೇಳುತ್ತಾರೆ. ಇನ್ನೊಂದು ಕಡೆ ಇಲಾಖೆಯವರ ರಿಪೋರ್ಟಿನ ಮೇಲೆ ಅವಲಂಬಿಸಿದೆ ಎಂದು ಹೇಳುತ್ತಾರೆ. ಹೀಗೆ ಒಬ್ಬರೊಬ್ಬರ ಮಾಹಿತಿ ತೆಗೆದು ಕೊಳ್ಳುವುದರಲ್ಲೇ ಕಾಲವನ್ನೆಲ್ಲಾ ಕಳೆದು ರೈತರಿಗೆ ಅನುಕೂಲವಾಗಿಲ್ಲ. ರೈತರಿಗೆ ಸಾಲ ಕೊಟ್ಟು ಬೇಕಾದರೆ ಗೂಡು ತೆಗೆದುಕೊಂಡು ಉತ್ತಾರ ಹಾಕಿಕೊಳ್ಳಲಿ. ಯಾವುದೋ ಒಂದು ರೂಪದಲ್ಲಿ ಹಣ ಬರಬೇಕು. 100ಕ್ಕೆ 99·9 ಜನ ರೈತರು ಯಾರೂ ಇವೊತ್ತಿನ ದಿವಸ ಹಣ ವೇವ್ ಮಾಡಿ ಎಂದು ಯಾರೂ ಕೇಳಲಿಲ್ಲ. ಕೈಗಾರಿಕಾ ಕ್ಷೇತ್ರವನ್ನು ನೋಡಿ. ಬಂಡವಾಳ ತೆಗೆದುಕೊಂಡಿರುವವರು ಯಾವುದಾದರೂ ರೂಪದಲ್ಲಿ ಹಣವೇವ್‌ಮಾಡಿ ಪ್ರಾಫಿಟ್ ಬರಲಿಲ್ಲ. ಎಂದು ಹೇಳುತ್ತಾರೆ. ಇನ್‌ಸಾಲ್‌ವೆನ್ಸಿಗೆ ಹಾಕಿ ಕೊಳ್ಳುತ್ತಾರೆ. ರೈತರು ಎಲ್ಲಾದರೂ ಇನ್‌ಸಾಲ್‌ವೆನ್ಸಿಗೆ ಹಾಕಿಕೊಂಡಿರುವ ಉದಾಹರಣೆ ಯಾವುದೂ ನಮ್ಮ ಗಮನಕ್ಕೆ ಬಂದಿದೆಯೇ ? ಬಂದಿಲ್ಲ. ಆದರೂ ರೈತರಿಗೆ ಈ ಕೈಗಾರಿಕೆಯಲ್ಲಿ ಹಣದೊರೆಯುತ್ತಿಲ್ಲ. 12 ಲಕ್ಷ ಜನರ ವಹಿವಾಟನ್ನು ಕೇವಲ 55 ರೇಷ್ಮೆ ಕೋಠಿಗಳು ಮಾಡುತ್ತಿವೆ. ಈ ಕೋಠಿಗಳ ಜೊತೆಗೆ ಪೈಪೋಟಿ ಕೆಲಸ ರೇಷ್ಮೆ ಮಾರಾಟದ ಸೊಸೈಟಿ ಮಾಡಬೇಕು. ಸರ್ಕಾರದವರು ಇವೊತ್ತಿನ ದಿವಸ ಯಾವರೀತಿ ಇವರ ಜೊತೆಯಲ್ಲಿ ಪೈಪೋಟಿ ಮಾಡಬೇಕು ? 55 ಕೋಠಿಗಳ ಜೊತೆಯಲ್ಲಿ ಅನೇಕ ವರ್ತಕರನ್ನು ತಮ್ಮ ಕೈಯ್ಯಲ್ಲಿ ಇಟ್ಟುಕೊಂಡು ಒಟ್ಟೇ ಮಾರುವ ಮಿಲ್ಲುಗಳ ಜೊತೆಯಲ್ಲಿ ವಹಿವಾಟು ಮಾಡಬೇಕಾದರೆ ಬಂಡವಾಳ ಎಷ್ಟು ಬೇಕು ? ಇಂಥಾ ಸೊಸೈಟಿ ಇವರ ಜೊತೆಗೆ ಹೋರಾಡುವುದು ಒಂದು ದೊಡ್ಡ ಸಮಸ್ಯೆ. ರೇಷ್ಮೆ ಮಾರ್ಕೆಟಿಂಗ್ ಸೊಸೈಟಿ ಸುಮಾರು 1957ನೇ ಇಸ್ವಿ ನವಂಬರ್ ತಿಂಗಳಿನಲ್ಲಿ ಪ್ರಾರಂಭವಾಗಿ ಕೆಲಸಮಾಡುತ್ತಿದೆ. ಇದಕ್ಕೆ ಹಣ ಕೊಡಬೇಕಾದರೆ 1958ನೇ ಇಸವಿ ಮಾರ್ಚಿ ಕೊನೆಯಲ್ಲಿ ಹಣ ಕೊಟ್ಟರು. ಅಲ್ಲಿಯವರೆಗೆ ಬಂಡವಾಳವಿಲ್ಲದೆ ಕೆಲಸ ಮಾಡುತ್ತಾ ಬಂದಿದೆ. ಅದರಲ್ಲಿ ಇರ

(ಶ್ರೀ ಎಸ್. ಆರ್. ರಾಮಯ್ಯ)

ತಕ್ಕ ಕಷ್ಟ ಏನು ಎಂದು ನಿಗಾಕೊಟ್ಟರೆ? ಅವರಿಗೆ ಸಾಲ ಕೊಡುವುದಕ್ಕೆ ಅವಕಾಶವಿಲ್ಲ. ಸಾಲತೆಗೆದು ಕೊಂಡು ಹೋಗಿ ಬಟ್ಟೆ ಮಾಡುವವರು ನೇಕಾರರು ಸಾಲಪಡೆದು ಈ ಕಸಬಿನಿಂದ ಕೆಲಸ ಮಾಡುತ್ತಿದ್ದಾರೆ. ಅದರಂತೆ ವ್ಯಾಪಾರ ನಡೆಯುತ್ತದೆ. ಇಲ್ಲಿ 55ಜನ ಇದ್ದಾರೆ. ಇವರು ಬೆಲೆ ಯಾವ ರೀತಿ ಹೆಚ್ಚಿಸಬೇಕು, ಯಾವರೀತಿ ತಗ್ಗಿಸಬೇಕು ಎಂದು ಆಲೋಚನೆ ಮಾಡುತ್ತಾರೋ ಆರೀತಿ ನಡೆಯುತ್ತದೆ. ಇವೊತ್ತು ರೇಷ್ಮೆ ವ್ಯಾಪಾರ ಹೇಗೆನಡೆಯುತ್ತದೆ ಎಂದರೆ ತೂಕ ಎಷ್ಟರ ಮಟ್ಟಿಗೆ ಬರುತ್ತದೋ ಅದನ್ನು ಅವಲಂಬಿಸಿಕೊಂಡು ಹೋಗುತ್ತದೆ. ಒಂದೊಂದು ಸಲಸರಿಯಾಗಿ ತೂಕ ಇರುತ್ತದೆ ಅದರಲ್ಲಿ ಇರತಕ್ಕ ಮಾಯಿಶ್ಚರ್ ಕಡಿಮೆ ಯಾಗಿ ಒಣಗಿಹೋದರೆ ಕಡಿಮೆ ತೂಕ ಆಗುತ್ತದೆ. ಆಗ ಸಾಕಾದಷ್ಟು ಬೆಲೆಯಾಗುವುದಿಲ್ಲ. ವ್ಯಾಪಾರ ದಲ್ಲಿ ಮೋಟಕು ಬೀಳುತ್ತದೆ.

ಹೀಗೆ ಈ ವ್ಯಾಪಾರವೆಲ್ಲ ಸಾಲದ ರೂಪ ದಲ್ಲಿ ಈ ರೇಷ್ಮೆ ಕೋರಿಗಳವರ ಮೂಲಕ ನಡೆ ಯುತ್ತಿದೆ. ಈವರ್ಷ ಈ ರೇಷ್ಮೆ ಕೋರಿಯವರು ನಮ್ಮಲ್ಲಿ ಉತ್ಪತ್ತಿಯಾಗತಕ್ಕ ರೇಷ್ಮೆಯಲ್ಲಿ ನೂರು ಭಾಗಕ್ಕೆ 70-80 ರಷ್ಟನ್ನು ಹೊರಗಡೆ ದೇಶಕ್ಕೆ ಕಳುಹಿಸಿರುತ್ತಾರೆ. ಅಂತೂ ಈ ರೀತಿಯಾಗಿ ಈ ರೇಷ್ಮೆ ವ್ಯವಹಾರ ವ್ಯಾಪಾರಗಳೆಲ್ಲಾ ಹಣವಂತರಾದ ಕೆಲವು ಜನರ ಕೈ ಸೇರಿರುತ್ತದೆ. ಸೊಸೈಟಿಗಳು ಜನರನ್ನು ಆಕರ್ಷಣೆ ಮಾಡುವಂಥ ಸ್ಥಿತಿಯಲ್ಲಿಲ್ಲ. ಹೀಗೆಲ್ಲಾ ಇರುವುದರಿಂದ ಈ ದಿವಸ ಈ ಕೆಲವು ರೇಷ್ಮೆ ಕೋರಿಗಳನ್ನಿಟ್ಟುಕೊಂಡಿರುವಂಥ ಜನರು 75 ಸಾವಿರ ಪೌಂಡ್ ರೇಷ್ಮೆಯನ್ನು ಹೊರ ಗಡೆ ಮಾರಾಟಮಾಡಿ ಸುಮಾರು 40 ಸಾವಿರ ರೂಪಾಯಿಗಳವರೆಗೂ ಬರಿಯ ಕಮಿಷನ್ ಪಡೆದಿರು ತ್ತಾರೆಂದು ಗೊತ್ತಾಗಿದೆ. ಈ ದಿವಸ ಈ ಖಾಸಗೀ ಕೋರಿಗಳ ಜನರು ತೆಗೆದುಕೊಳ್ಳುತ್ತಿರುವುದು ಕೇವಲ ಶೇಕಡ 2 ಕಮಿಷನ್, ಸೊಸೈಟಿಯವರು ತೆಗೆದು ಕೊಳ್ಳುತ್ತಿರುವ ಕಮಿಷನ್ ಶೇಕಡ 1 ಇದೆ. ಈ ವ್ಯಾಪಾರಸ್ಥರು ಗಿರಾಕಿಗಳಿಗೆ ಅದೇನೋ ಧರ್ಮದ ಫಂಡು ಆ ಫಂಡು ಈ ಫಂಡು ಎಂದು ಏನೇನೋ ಹೇಳಿ, ಅದೇನು ಕರ್ಮದ ಫಂಡೋ ನಾನು ಕಾಣೆ, ಅಂತೂ ಹೀಗೆ ಜನರಿಂದ ಕಮಿಷನ್ ಪಡೆದು ಸುಖವಾಗಿದ್ದಾರೆ. ನಗದು ವ್ಯಾಪಾರ ಮಾಡತಕ್ಕವರಿಂದ ನಾಲ್ಕಾಣೆ ಕಮಿಷನ್ ತೆಗೆದುಕೊಂಡರೆ ಸಾಲದಮೇಲೆ ವ್ಯಾಪಾರ ಮಾಡತಕ್ಕ ರೈತರಿಂದ 8 ಆಣೆ ಕಮಿಷನ್ ಪಡೆದು ಕೊಳ್ಳುತ್ತಿದ್ದಾರೆ. ಹೀಗೆ ಕೇವಲ ಶೇಕಡ 2 ಕಮಿಷನ್ ತೆಗೆದುಕೊಳ್ಳುತ್ತಿದ್ದಾಗಲೇ 40 ಸಾವಿರ ರೂಪಾಯಿ ಕಮಿಷನನ್ನು 75 ಸಾವಿರ ಪೌಂಡ್ ಗಳಿಗೆ ಪಡೆದಿರುವಾಗ ಇನ್ನು ಇಲ್ಲಿ ಉತ್ಪತ್ತಿ ಆಗತಕ್ಕ 18 ಲಕ್ಷ ಪೌಂಡ್ ರೇಷ್ಮೆ ಮಾರಾಟದಿಂದ ಅವರಿಗೆ ಇನ್ನೆಷ್ಟು ಕಮಿಷನ್ ಬರಬಹುದೆಂಬುದನ್ನು ತಾವು ಗಳೇ ಲೆಕ್ಕಾಹಾಕಿಕೊಳ್ಳಬಹುದು. ಈ ವಿಚಾರದ ಕಡೆಗೆ ಸರ್ಕಾರದವರು ಹೆಚ್ಚುಗಮನ ಕೊಡ ಬೇಕಾಗಿದೆ. ರೇಷ್ಮೆ ಗೂಡುಗಳನ್ನು ಸಾಕತಕ್ಕ ಜನರು ಕಣ್ಣಿಗೆ ಎಣ್ಣೆ ಹಾಕಿಕೊಂಡು, ರಾತ್ರಿಯೆಲ್ಲ ನಿದ್ರೆಕಟ್ಟಿ, ತಮ್ಮ ಆರೋಗ್ಯವನ್ನು ಹಾಳುಮಾಡಿ ಕೊಂಡು ತಿಂಗಳಲ್ಲಿ 25-30 ದಿವಸ ಕಾಲಕ್ಕೆ ಸರಿ ಯಾಗಿ ಊಟವಿಲ್ಲದೆ, ನಿದ್ರೆಯಿಲ್ಲದೆ ತೊಂದರೆಗೊಳ ಗಾದ ಜನರಿಗೆ ಯಾವ ಒಂದು ಪ್ರತಿಫಲವೂ ಬಾರದೆ ಅವರ ಸಂಪಾದನೆಯೆಲ್ಲ ಈ ಕೋರಿಕಾನೆಗಳವರ ಪಾಲಾಗಿದೆ.

ಶ್ರೀ ಟಿ. ಮರಿಯಪ್ಪ.—ಆ ಕೋರಿ ಕಾನೆಯವರ ಕಡೆಗೆ ಹೋಗದೆ ಸೊಸೈಟಿಗಳ ಕಡೆ ಬರಲು ಏನು ಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಸಲಹೆ ಮಾಡಿ.

ಶ್ರೀ ಎಸ್. ಆರ್. ರಾಮಯ್ಯ.—ಹೀಗೆಲ್ಲಾ ಇಷ್ಟು ಕಷ್ಟಪಟ್ಟುಕೊಂಡು ರೇಷ್ಮೆ ಉದ್ಯಮದಲ್ಲಿ ತೊಡಗಿರತಕ್ಕ ಜನರಿಗೆ ದೊರೆಯುತ್ತಿರುವ ಪ್ರತಿಫಲ ಹೇಗಿದೆಯೆಂದರೆ, ಹಾಲನ್ನು ಕಡೆದು ಬಂಡವಾಳಷಾಹಿ ಗಳು ಬೆಣ್ಣೆಯನ್ನು ತೆಗೆದುಕೊಂಡು ಬರಿ ಮಜ್ಜಿಗೆ ಯನ್ನು ರೇಷ್ಮೆ ವ್ಯವಸಾಯ ಮಾಡತಕ್ಕ ರೈತರಿಗೆ ಬಿಟ್ಟಿರುತ್ತಾರೆ. ಆ ಮಜ್ಜಿಗೆಯಲ್ಲೇ ಅವರು ತೃಪ್ತಿ ಪಟ್ಟುಕೊಳ್ಳಬೇಕು. ರೇಷ್ಮೆಯಲ್ಲಿ ಶ್ರೇಷ್ಠವಾದದ್ದು ಮತ್ತು ಹೆಚ್ಚು ಬೆಲೆಯಾಗುವಂಥಾದ್ದೆಲ್ಲ ಬೆಂಗಳೂರಿಗೆ ಬಂದು ಇಲ್ಲಿ ಕೆಲವು ಜನರು ಅದರ ಸಂಪೂರ್ಣ ಲಾಭವನ್ನು ಹೊಂದುತ್ತಿದ್ದಾರೆ. ಹೀಗೆ ಈ ಕೈಗಾರಿಕೆಯಿಂದ ಸರ್ಕಾರಕ್ಕೂ ಲಾಭವಿಲ್ಲ, ಬೆಳೆಯು ತಕ್ಕ ರೈತನಿಗೂ ಲಾಭವಿಲ್ಲ. ಇವರ ಮಧ್ಯ ಈ ರೇಷ್ಮೆ ತಯಾರಿಯಲ್ಲಿ ತೊಡಗಿರತಕ್ಕವರಿಗೆ ಅನುಕೂಲವಿಲ್ಲ. ರೇಷ್ಮೆ ಬೆಳೆಯ ಪೂರ್ಣ ಪ್ರಯೋಜನವೆಲ್ಲ ಬೆಂಗಳೂರಿ ನಲ್ಲಿರತಕ್ಕ ನಾಲ್ಕಾರು ಜನ ಬಂಡವಾಳಗಾರರ ಪಾಲಾಗುತ್ತಿದೆ. ಈ ತೊಂದರೆಯನ್ನು, ನಿವಾರಣೆ ಮಾಡತಕ್ಕ ಬಗ್ಗೆ ನಾವು ಸರ್ಕಾರಕ್ಕೆ ಪದೇ ಪದೇ ಒತ್ತಾಯ ಹಾಕುತ್ತಲೇ ಇದ್ದೇವೆ. ಅದಕ್ಕೆ ಕೇಂದ್ರ ಸರ್ಕಾರದವರು ಈ ಉದ್ಯಮಕ್ಕೆ ಸಾಕಷ್ಟು ರಕ್ಷಣೆ ಕೊಡುತ್ತಿದ್ದೇವೆಂದು ಹೇಳಿಕೊಳ್ಳು ತ್ತಿದ್ದಾರೆ. ಇತ್ತ ರಾಜ್ಯ ಸರ್ಕಾರದವರು ನಾವು ಇಲಾಖೆಯನ್ನಿಟ್ಟು ಅದರ ಮುಖೇಣ ರೈತರಿಗೆ ನಾನಾ ಮುಖವಾಗಿ ಸಹಾಯ ನೀಡುತ್ತಿದ್ದೇವೆಂದು ಹೇಳಿಕೊಳ್ಳುತ್ತಿದ್ದಾರೆ. ಆದಾಗ್ಯೂ ಈ ಹೊತ್ತಿನವ ರೆಗೂ ರೈತನಿಗೆ ಆಗುತ್ತಿರುವ ಕಷ್ಟ ನಷ್ಟಗಳು ಮಾತ್ರ ಇನ್ನೂ ತಪ್ಪಲಿಲ್ಲ. ಕಷ್ಟಪಡತಕ್ಕ ಜನರಿಗೆ ಲೇಶಾಂಶವೂ ಸುಖವಿಲ್ಲ; ಸರ್ಕಾರಕ್ಕೂ ಲಾಭವಿಲ್ಲ. ಕೇವಲ ಕೆಲವುಜನ ಬಂಡವಾಳಷಾಹಿಗಳ ಭೋಗವಸ್ತು ವಾಗಿ ನಿಂತಿದೆ. ಈ ಪದಾರ್ಥವನ್ನು, ಜನರು ತಮ್ಮ ನಿತ್ಯ ಜೀವನದಲ್ಲಿ ಬಳಸಲು ಸಾಧ್ಯವೇಇಲ್ಲ. ಎಲ್ಲೋ ಕೆಲವರು ಮಾತ್ರ ಮಡಿಗೋಸ್ಕರವಾಗಿ, ಅದರಲ್ಲೂ ಮದುವೆ-ಮುಂಜಿ ಅಥವಾ ದೇವಸ್ಥಾನಗಳಿಗೆ ಹೋಗು ವಂಥ ಕಾಲಗಳಲ್ಲಿ ಮಾತ್ರ ಮಡಿದೃಷ್ಟಿಯಿಂದ ಕೆಲವರು ಮಾತ್ರ ಈ ರೇಷ್ಮೆ ಬಟ್ಟೆಯನ್ನು ಉಪ ಯೋಗಿಸುತ್ತಿದ್ದಾರೆ. ಈ ದಿವಸ ನಾವು ಹಾಗೆ ಆಲೋಚನೆಮಾಡಿ ಕೊಡುವುದಾದರೆ ಈ ರೇಷ್ಮೆ ತಯಾರಿಸುವ ಉದ್ಯಮದಲ್ಲಿ ತೊಡಗಿರತಕ್ಕ ಜನರ ಜೀವನಕ್ಕೆ ಗಣಿಗಳ ಕೆಲಸದಲ್ಲಿ ತೊಡಗಿರತಕ್ಕವರ ಜೀವನದಲ್ಲಿರುವಷ್ಟೇ ತೊಂದರೆ-ಅಪಾಯಗಳಿರುತ್ತವೆ. ಇವರ ಈ ಕೆಲಸದಲ್ಲೂ ಅಷ್ಟೇ ತೊಂದರೆಗಳೂ ಅಪಾಯಗಳೂ ಇರುತ್ತವೆ. ಬಂಗಾರದಷ್ಟೇ ಬಣ್ಣದಲ್ಲೂ, ಬೆಲೆಯಲ್ಲೂ, ಶ್ರೇಷ್ಠತ್ವದಲ್ಲೂ ಈ ರೇಷ್ಮೆಯೂ ಇರುತ್ತದೆ. ಉಪಯೋಗದಲ್ಲೂ ಕೂಡ ಹಾಗೇ ಇದೆ. ಆದರೆ ಯಾರೂಕೂಡ ಇದರ ತೊಂದರೆಗಳ ಕಡೆಗೆ ಇಲ್ಲಿಯವರೆಗೂ ನಿಗಾ ಕೊಟ್ಟಂತೆ ಕಾಣುತ್ತಿಲ್ಲ. ಆದರೆ ನಾನೀಗ ಇದರಬಗ್ಗೆ ಏನೊಂದು ಸಲಹೆಯನ್ನು ಕೊಡ ಬಯಸುತ್ತೇನೆ ಎಂದರೆ, ಸುಮಾರು 55 ಕೋಟಿ ರೂಪಾಯಿಗಳಷ್ಟು ಬೆಲೆ ಬಾಳತಕ್ಕ ರೇಷ್ಮೆ ಉತ್ಪನ್ನದಲ್ಲಿ ತೊಡಗಿರತಕ್ಕ ಲಕ್ಷಾಂತರ ಜನರ ಅಳಿವು-ಉಳಿವು ಈ ದಿವಸ ಕೇವಲ ಕೆಲವು ಜನ ಬಂಡವಾಳ ಷಾಹಿಗಳ ಕೈಯಲ್ಲಿ ನಿಂತಿದೆ. ಇದು ಎಂದಿದ್ದರೂ ಅಪಾಯಕಾರಿ. ಇದನ್ನು ತಪ್ಪಿಸ

ಬೇಕಾಗಿದ್ದರೆ ಸಾಕಷ್ಟು ಸೊಸೈಟಿಗಳನ್ನು ಸ್ಥಾಪಿಸಿ ಇದರ ಪ್ರತಿಫಲ ಈ ಉದ್ಯಮದಲ್ಲಿ ನಾನಾ ಮುಖವಾಗಿ ತೊಡಗಿರತಕ್ಕ ಜನರಿಗೆ ಲಭಿಸುವ ಹಾಗೆ ಮಾಡಬೇಕು. ಹೀಗೆ ಒಂದು ವ್ಯವಸ್ಥೆ ಮಾಡತಕ್ಕ ವಿಚಾರದಲ್ಲಿ ನಾನೀಗ ಒಂದೆರಡು ಮಾತುಗಳನ್ನು ಆಡಬೇಕೆಂದಿದ್ದೇನೆ. ಸರ್ಕಾರದವರು ಈದಿವಸ ಬೇರೆ ಬೇರೆ ವ್ಯವಸಾಯದಲ್ಲಿ ತೊಡಗಿರತಕ್ಕ ಜನರಿಗೆಲ್ಲ ನಾನಾ ರೂಪದಲ್ಲಿ, ಬಾವಿ ತೆಗೆಸುವುದಕ್ಕೆ, ಬೆಳೆಗಳ ಬಗ್ಗೆ ಸಾಲದ ರೂಪದಲ್ಲಿ ಅನುಕೂಲತೆಗಳನ್ನೊದಗಿಸಿದ್ದಾರೆ. ಅದೇರೀತಿ ಈ ಉದ್ಯಮದಲ್ಲೂ ತೊಡಗಿರತಕ್ಕ ಜನಗಳಿಗೆ ಎಂದರೆ ರೇಷ್ಮೆ ಹುಳುಗಳನ್ನು ಸಾಕತಕ್ಕವರಿಗೂ, ಗೂಡುಗಳನ್ನು ಬಿಚ್ಚಿ ರೇಷ್ಮೆ ತೆಗೆಯತಕ್ಕವರಿಗೂ, ರೇಷ್ಮೆಗೂಡನ್ನು ತಯಾರಿಸತಕ್ಕವರಿಗೂ ಸಾಲಗಳನ್ನು ಸುಲಭರೀತಿಯಲ್ಲಿ ಒದಗಿಸಲು ಸರ್ಕಾರದವರು ಪ್ರಯತ್ನ ಮಾಡಬೇಕು. ಇದೇ ಈ ದಿವಸ ಬಂದಿರತಕ್ಕ ಒಂದು ದೊಡ್ಡ ಸಮಸ್ಯೆ. ಈ ರೇಷ್ಮೆ ವ್ಯವಸಾಯದಲ್ಲಿ ಯಾರೇ ಆಗಲಿ 5-10 ವರ್ಷಗಳಿಗಿಂತ ಹೆಚ್ಚಿನ ಕಾಲ ಕೆಲಸ ಮಾಡಲು ಆಗುವುದಿಲ್ಲ. 10 ವರ್ಷಕ್ಕೆ ಮೇಲ್ಪಟ್ಟು ಯಾರಿಂದಲೂ ಸಾಧ್ಯವಾಗುವುದಿಲ್ಲ. ರೇಷ್ಮೆ ತೆಗೆಯುವ ಬದುಕು ಬಹಳ ಉಷ್ಣಾಂಶವನ್ನು ಉಂಟುಮಾಡತಕ್ಕಂಥಾ ಕಸುಬಾಗಿದೆ. ಜನರ ಆರೋಗ್ಯ ಬಹುಬೇಗ ಕೆಡುತ್ತದೆ. ಇದು ಅಂಥ ತೀಕ್ಷ್ಣವನ್ನುಂಟುಮಾಡತಕ್ಕಂಥಾ ಕಸುಬು. ಇದರಲ್ಲಿ ತೊಡಗಿರತಕ್ಕ ಜನರ ಆರೋಗ್ಯದ ಮೇಲೆ ಇದು ಒಂದು ಕೆಟ್ಟ ಪರಿಣಾಮವನ್ನುಂಟು ಮಾಡುತ್ತದೆ. ಈ ಉದ್ಯಮದಲ್ಲಿ ತೊಡಗಿರತಕ್ಕ ಜನರ ಆರೋಗ್ಯದ ಬಗ್ಗೆ ಇದು ಅಷ್ಟು ಕೆಡಕನ್ನುಂಟು ಮಾಡತಕ್ಕದ್ದಾಗಿದ್ದರೂ ಈ ಉದ್ಯಮದಲ್ಲಿ ತೊಡಗಿರತಕ್ಕವರಿಗೆ ಒಂದು ಇನ್ಷೂರೆನ್ಸ್ ಸ್ಕೀಂ ಆಗಲೀ ಅಥವಾ ಒಂದು ಪ್ರಾವಿಡೆಂಟ್ ಫಂಡ್ ಸ್ಕೀಮಾಗಲಿ ಯಾವುದನ್ನೂ ಮಾಡಿಲ್ಲ. ಸರ್ಕಾರ ಇಂಥಾ ಯಾವ ಅನುಕೂಲಗಳನ್ನೂ ಮಾಡಿಲ್ಲ. ಹೆಸರಿಗೆ ಇದೊಂದು ಗೃಹ ಕೈಗಾರಿಕೆ ಬೇರೆ. ಇದರ ಅಭಿವೃದ್ಧಿಯ ಬಗ್ಗೆ ಇದರಲ್ಲಿ ತೊಡಗಿರತಕ್ಕ ಜನರ ಆರೋಗ್ಯ ದೃಷ್ಟಿಯಿಂದ, ಈ ಜನರ ಮಕ್ಕಳು ಮರಿಗಳ ಆರೋಗ್ಯ ದೃಷ್ಟಿಯಿಂದ ಈ ಬಾಬಿಗೆ ಹೆಚ್ಚಿನ ನಿಗವನ್ನು ಕೊಡತಕ್ಕದ್ದು ಅತ್ಯಗತ್ಯ. ಆದರೆ ಈದಿವಸ ಈ ಉದ್ಯಮವನ್ನು ಸರ್ಕಾರ ಬಹಳ ತಾತ್ಸಾರ ಭಾವನೆಯಿಂದ ಕಾಣುತ್ತಿದೆ. ಹೀಗಾಗಿ ಈ ರೇಷ್ಮೆ ವ್ಯವಹಾರದ ಆರ್ಗನೈಸೇಷನ್‌ವೇನಿದ್ದರೂ ಈ ಬೆಂಗಳೂರು ನಗರ ಒಂದರಲ್ಲಿಮಾತ್ರ ಕೇಂದ್ರೀಕೃತವಾಗಿದೆಯೇ ಹೊರತು ಮತ್ತೆ ಎಲ್ಲೂ ಈ ಉದ್ಯಮದಬಗ್ಗೆ ಜನರಿಗೆ ಅಷ್ಟು ಆಕಾಂಕ್ಷೆಇಲ್ಲ. ಸರ್ಕಾರದವರ ನಿಗವೆಲ್ಲ ಈ ಬೆಂಗಳೂರಿನಲ್ಲಿರತಕ್ಕ ರೇಷ್ಮೆ ಕೋಠಿಗಳವರಮೇಲೆ ಬಿದ್ದಿರುತ್ತದೆಯೇ ವಿನಾ ಈ ಉದ್ಯಮದಲ್ಲಿ ನಿರತರಾಗಿರತಕ್ಕ ಜನರ ಆರೋಗ್ಯದಕಡೆಗೆ ಅವರ ಗಮನವೇ ಹರಿದಿಲ್ಲ. ಇನ್ನೊಂದು ದೊಡ್ಡ ಸಮಸ್ಯೆಬೇರೆ ಈದಿವಸ ಎದ್ದು ಕಾಣುತ್ತಿದೆ. ಜಾತ್ರೆಗಳಿಗೆ ಹೋಗತಕ್ಕ ಜನ ಅಲ್ಲಿ ಆಕಸ್ಮಿಕವಾಗಿ ಆಗತಕ್ಕ ಅನಾಹುತಗಳಿಗೆ ಹೇಗೆ ಗಮನ ಕೊಡುತ್ತಿಲ್ಲವೋ ಹಾಗೆ ಈ ದಿವಸ ಏನೋ ಒಂದುರೀತಿಯಿಂದ ಈ ವ್ಯವಸಾಯದಲ್ಲಿ ಆಗತಕ್ಕ ಕಷ್ಟ ನಷ್ಟಗಳ ಕಡೆಗೆ ಜನ ಗಮನ ಕೊಡದಿರುವುದು ಒಂದು ವಿಶೇಷವೇ ಸರಿ. ಆದರೆ ಹೀಗೆ ಇದು ಬಹುಕಾಲ ಮುಂದುವರೆಯಲಾರದು. ಜನರ ಆರೋಗ್ಯ ದಿನದಿನಕ್ಕೂ ಕ್ಷೀಣವಾಗುತ್ತಿದೆ. ಆದುದರಿಂದ ಸರ್ಕಾರದವರು ಈ ಉದ್ಯಮದಲ್ಲಿ ತೊಡಗಿರತಕ್ಕ ಜನರ ಆರೋಗ್ಯದ ಕಡೆಗೂ ಕೂಡಲೆ ಗಮನ ಕೊಡಬೇಕು. ಈ ಅನುಕೂಲಗಳನ್ನೊದಗಿಸಲು ಪ್ರತಿಯೊಂದು ರೇಷ್ಮೆ ಬೆಳೆಯತಕ್ಕ ಪ್ರದೇಶದಲ್ಲೂ ಸೊಸೈಟಿಗಳನ್ನು ಸ್ಥಾಪಿಸಬೇಕು. ರೇಷ್ಮೆ ಗೂಡುಗಳನ್ನು ಬಿಚ್ಚಿ ದಾರ ತೆಗೆಯತಕ್ಕವರಿಗೆ ಹೆಚ್ಚಿನ ಸಹಾಯ ದೊರೆಯಬೇಕು. ಆರೋಗ್ಯ ರಕ್ಷಣೆಯನ್ನು ಕೊಡಬೇಕು.

12 NOON.

ಕೆಲವು ಸಂದರ್ಭಗಳಲ್ಲಿ ನಮ್ಮ ಗ್ರಾಮಾಂತರ ಕೈಗಾರಿಕೆಗಳಿಗೋಸ್ಕರ, ಕೆಲವರಿಗೆ ಹಣ ಕೊಟ್ಟಿದೆ. ಕೆಲವರಿಗೆ ಚರಕ ಹಾಕಿಕೊಳ್ಳುವುದಕ್ಕೆ ಸೌಲಭ್ಯ ಮಾಡಿಕೊಟ್ಟಿದೆ. ಆದರೆ ಸೌಲಭ್ಯ ಮಾಡಿಕೊಟ್ಟ ಕ್ಷಣಕ್ಕೇ ನಿರ್ದಿಷ್ಟವಾದಬೆಲೆ ಸಿಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕು. ನಿರ್ದಿಷ್ಟವಾದ ಬೆಲೆ ಸಿಗದೆ, ಸೌಲಭ್ಯಗಳನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳಲು ಅವಕಾಶವಿಲ್ಲ. ಈರೀತಿ ಚೂರು ಚೂರಾಗಿ, ಅಲ್ಪಸ್ವಲ್ಪ ಅಲ್ಲೊಂದುಕಡೆ ಇಲ್ಲೊಂದುಕಡೆ ಸಹಾಯ ಮಾಡಿದರೆ ಸಾಕಾಗುವುದಿಲ್ಲ. ಯಾವ ಕ್ಷೇತ್ರದಲ್ಲಿ ಈ ವೃತ್ತಿಯನ್ನು ಅವಲಂಬಿಸಿಕೊಂಡಿರುತ್ತಾರೋ ಅಂಥ ಕಡೆ ಹಣದ ಸೌಲಭ್ಯ ಒದಗಿಸಬೇಕು. ಅಲ್ಲದೆ ಸೌಲಭ್ಯವನ್ನು ಒಂದು ಯೋಜನಾ ರೂಪದಲ್ಲಿ ಒದಗಿಸಬೇಕು. ಆರ್ಥಿಕ ದೃಷ್ಟಿಯಿಂದ ದಾರತೆಗೆಯುವುದರಿಂದ ಹಿಡಿದು ರೇಷ್ಮೆ ನಮ್ಮ ಸೊಸೈಟಿಗೆ ಬರುವವರೆಗೆ ಒಂದು ವ್ಯವಸ್ಥಿತರೀತಿಯಲ್ಲಿ ನಡೆಯಬೇಕು. ಆಗ ಈ ಕೈಗಾರಿಕೆಗೆ ಒಂದು ಬೆಲೆ ಸಿಕ್ಕುತ್ತದೆ. ನಾವು ಇದನ್ನು ಉತ್ಪನ್ನದ ಭಾಗವನ್ನಾಗಿ ಮಾಡಿಕೊಳ್ಳಬೇಕು.

ಶ್ರೀ ಎಂ. ಲಿಂಗೇಗೌಡ (ಕನಕಪುರ).—ಕಾರ್ಪೊರೇಷನನ್ನು ಅಟಾನಮಸ್ ಬಾಡಿಯಾಗಿ ಮಾಡಬೇಕೆಂದು ಅಮೆಂಡ್‌ಮೆಂಟ್ ಬಂದಿದೆ. ಆ ಅಮೆಂಡ್‌ಮೆಂಟ್ ವಿಷಯದಲ್ಲಿ ಮಾನ್ಯ ಸದಸ್ಯರು ಮಾತನಾಡುವುದು ಒಳ್ಳೆಯದು.

ಶ್ರೀ ಎಸ್. ಆರ್. ರಾಮಯ್ಯ.—ಈ ವಿಚಾರಕ್ಕೆ ಕೊನೆಯಲ್ಲಿ ಬರುತ್ತೇನೆ. ಎಲ್ಲಾ ಹೇಳಿಬಿಟ್ಟು, ಬೇಸ್‌ಮೆಂಟ್ ಸರಿಯಾಗಿ ಹಾಕಿ, ಕಾರ್ಪೊರೇಷನ್ ಮಾಡಿಕೊಂಡರೆ ಸರಿ. ಬೇಸ್‌ಮೆಂಟೇ ಸರಿಯಾಗಿ ಇಲ್ಲದಿರುವಾಗ, ಕಟ್ಟಡ ಕಟ್ಟಿದರೆ ಅದು ಕುಸಿದು ಬೀಳುತ್ತದೆಂದು ತಮ್ಮ ಗಮನವನ್ನು ಎಳೆಯಲು ಇಚ್ಛೆಪಡುತ್ತೇನೆ. ಈ ಬೇಸ್‌ಮೆಂಟಗೋಸ್ಕರವಾಗಿ ಇಷ್ಟೂ ಹೇಳುತ್ತೇನೆ. ಏಕದಂ ಕಾರ್ಪೊರೇಷನ್ ಮಾಡಬೇಕೆಂದರೆ ಅದು ಫಲಕಾರಿಯಾಗುವುದಿಲ್ಲ. ನೀವು ಅದಕ್ಕೆ ಅವಕಾಶ ಕೊಡಬೇಡಿ. ನಾನು ಇಷ್ಟು ಹೇಳಬಹುದು, ಬೇಸ್‌ಮೆಂಟ್ ಹಾಕುವಾಗ ಸರಿಯಾಗಿ ಹಾಕಿದೆಯೇ ಎಂದು ನೋಡಬೇಕು. ಬರೀ ಮಣ್ಣು ಹಾಕಿ, ಮೇಲೆ ವೈಟ್‌ವಾಷ್‌ಮಾಡಿ, ಬಣ್ಣ ಬಳಿದರೆ, ಬಿಲ್ಡಿಂಗ್ ಹೇಗಿದೆ ಎಂದು ಗೊತ್ತಾಗುತ್ತದೆಯೆ? ಸರಿಯಾಗಿ ಪಾಯ ಹಾಕದೆ, ಬೇಸ್‌ಮೆಂಟ್ ಹಾಕದೆ, ಕಟ್ಟಡವನ್ನು ಕಟ್ಟುತ್ತಾ ಇದ್ದರೆ, ಮೇಲೆ ಬೇಕಾದಷ್ಟು ಮಾಡುತ್ತಾ ಇದ್ದರೆ ಏನು ಪ್ರಯೋಜನವೆಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ಬೇಸ್‌ಮೆಂಟ್ ಭದ್ರವಾಗುವ ತನಕ, ಈ ಕಾರ್ಪೊರೇಷನ್ ಮಾಡುವುದನ್ನು ನಿಲ್ಲಿಸಿಬಿಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಲಿಂಗೇಗೌಡ.—ಫ್ಯಾಕ್ಟರಿಗಳಲ್ಲಿ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದಾರೆ. ಫಿಲೇಚರ್‌ಮೇಲೆ ಇನ್‌ವೆಸ್ಟ್ ಮಾಡಿಬಿಟ್ಟು ನಷ್ಟವಾಗುತ್ತಿದೆ ಎಂದು ಅವರೇ ಹೇಳುತ್ತಿದ್ದಾರೆ. ಕೊಳ್ಳೆಗಾಲ, ಕನಕಪುರ, ಮತ್ತು

(ಶ್ರೀ ಎಂ. ಲಿಂಗೇಗೌಡ)

ಚನ್ನಪಟ್ಟಣದಲ್ಲಿ ನಷ್ಟವಾಗಿದೆ ಎಂದು ಹೇಳಿದ್ದಾರೆ. ಅದನ್ನು ಸರಿಪಡಿಸುವುದಕ್ಕೆ ಒಂದು ಅಟಾನಮಸ್ ಬಾಡಿಯನ್ನಾಗಲಿ ಅಥವಾ ಕಾರ್ಪೊರೇಷನ್ನನ್ನಾಗಲಿ ಮಾಡಿ ಎಂದು ನಾನು ಹೇಳುತ್ತೇನೆ. ಫ್ಯಾಕ್ಟರಿ ಹೊಸದಾಗಿ ಮಾಡಿ ಎಂದು ಹೇಳುತ್ತಿಲ್ಲ. ನಷ್ಟ ತಪ್ಪಿಸುವುದಕ್ಕೆ ಬೋರ್ಡ್ ಮಾಡಿ ಎಂದು ಹೇಳುತ್ತೇವೆ. ಈ ವಿಷಯದ ಮೇಲೆ ಮಾನ್ಯಸದಸ್ಯರು ಮಾತನಾಡುತ್ತಾ ಇಲ್ಲ.

ಶ್ರೀ ಎಸ್. ಆರ್. ರಾಮಯ್ಯ.—ಇದರ ಮೇಲೆ ಮಾತನಾಡಲು ಏನೂ ತಾಪತ್ರಯವಿಲ್ಲ. ಸ್ಥಳದಲ್ಲಿರ ತಕ್ಕಂಥವರು ಸಿಲ್ಕ್ ಬೋರ್ಡಿನೊಳಗಿರುವಾಗ, ಅವರೇ ಈ ಬೋರ್ಡಿನ ಕೆಲಸವನ್ನು ಮಾಡಬಹುದು. ಅದಕ್ಕೆ ಅಡ್ಡಿ ಇಲ್ಲ. ಇವತ್ತಿನ ದಿವಸ ಈ ವ್ಯವಸಾಯ ಸರಿಯಾಗಿದ್ದಿದ್ದರೆ ತಾಪತ್ರಯವಾಗುತ್ತಿರಲಿಲ್ಲ. ಮೂಲದಲ್ಲಿಯೇ ಇದು ಕೆಟ್ಟು ಹೋಗಿರುವಾಗ, ಕಾರ್ಪೊರೇಷನ್ ಮಾಡಿಬಿಟ್ಟ ಕ್ಷಣಕ್ಕೆ ಸರಿಹೋಗುತ್ತದೆಂದು ಹೇಳುವುದಕ್ಕಾಗುವುದಿಲ್ಲ.

ಕೊನೆಯದಾಗಿ ಒಂದು ಮಾತು ಹೇಳಬೇಕಾಗಿದೆ. ಅನೇಕ ಬಡ ಸಂಸಾರಗಳು ನಂಬಿಕೊಂಡಿರುವ ಈ ಉದ್ಯೋಗವನ್ನು ಸರಿಪಡಿಸಬೇಕು. ನಿಜವಾಗಿಯೂ ಕೂಡ ಸರ್ಕಾರದವರು ಬಹಳ ಉಚ್ಚರೀತಿಯಲ್ಲಿ ಜನಕ್ಕೆ ತಕ್ಕ ವ್ಯವಸ್ಥೆ ಮಾಡಿಕೊಡಬೇಕು. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಮತ್ತು ಬೆಂಗಳೂರು ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ಕ್ಷಾಮ ಪರಿಸ್ಥಿತಿಯಲ್ಲಿ ಕೆಲಸ ಸಿಗದೆ ಇದ್ದಾಗ, ಈ ಕೈಗಾರಿಕೆ ಇಲ್ಲದಿದ್ದರೆ ಜನಗಳು ಬದುಕುತ್ತಾ ಇರಲಿಲ್ಲ. ಜನ ವಲಸೆ ಹೋಗಬೇಕಾಗಿತ್ತು. ಎಷ್ಟೇ ರಿಲೀಫ್ ಕಾಮಗಾರಿಗಳನ್ನು ಮಾಡಿದ್ದರೂ, ಕೋಲಾರ ಡಿಸ್ಟ್ರಿಕ್ಟಿನಲ್ಲಿ ಮತ್ತು ಬೆಂಗಳೂರು ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ಈ ಕಸಬಿನಿಂದ ಬಹಳ ಜನ ಬದುಕಿಕೊಂಡಿರುತ್ತಾರೆ. ಇದು ಅವರಿಗೆ ಜೀವನಾಧಾರವಾಗಿದೆ. ಈ ಕೈ ಕಸಬಿನಿಂದ ಕೋರ್ಟಿನ ವ್ಯವಹಾರ ಕಡಮೆಯಾಗಿದೆ. ಕೆಲಸವಿದ್ದರೆ ಕೋರ್ಟಿಗೆ ಹೋಗುವುದಕ್ಕೆ ಸಮಯ ಸಿಕ್ಕುವುದಿಲ್ಲ. ದುರಾಲೋಚನೆ ಇರುವುದಿಲ್ಲ. ಒಳ್ಳೆಯ ಆಲೋಚನೆ ಮಾಡುವುದಕ್ಕೆ ಈ ಕಸಬು ಒಳ್ಳೆಯ ಮಾರ್ಗವಾಗಿದೆ. ಕೆಟ್ಟ ಯೋಚನೆಗೆ ಇದರಲ್ಲಿ ಮಾರ್ಗವೇ ಇಲ್ಲ. ಇದನ್ನು ಗಮನಿಸಬೇಕು. ಇದರಲ್ಲಿ ಆ ಶ್ರೇಷ್ಠತೆ ಇದೆ. ಈ ಶ್ರೇಷ್ಠತೆ ಅಡಕವಾಗಿರತಕ್ಕಂಥ ಉದ್ಯೋಗ ಎಲೆಮರೆ ಕಾಯಿನಂತೆ ಇದೆ. ಸ್ವಲ್ಪ ದಯವಿಟ್ಟು ಕಣ್ಣುಬಿಟ್ಟು ನೋಡಿರಿ. ಈ ಉದ್ಯೋಗವನ್ನು ಬೆಳಸಿಕೊಳ್ಳಲಿಕ್ಕೆ ಸಾಕಾದಷ್ಟು ಅವಕಾಶಗಳು ಸೌಲಭ್ಯಗಳು ಬೇಕೇ ವಿನಾ, ಒಂದು ಕಾರ್ಪೊರೇಷನ್ ಅಲ್ಲ; ಅದನ್ನು ಮಾಡುವುದರಿಂದ ಇವರ ಅಭಿವೃದ್ಧಿ ಸಾಧ್ಯವಾಗಲಾರದು ಎಂದು ಹೇಳಿ, ಅಧ್ಯಕ್ಷರಿಗೆ ಅಭಿವಂದನೆಗಳನ್ನು ಸಲ್ಲಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಈಗ ಶ್ರೀಮಾನ್ ಲಿಂಗೇಗೌಡರು ತಂದಿರುವ ನಿರ್ಣಯ ಬಹಳ ಮುಖ್ಯವಾದುದು ಮತ್ತು ಸ್ವಾಗತಾರ್ಹವಾದುದು. ಈ ನಿರ್ಣಯನ್ನು ವಿರೋಧಿಸಿದ ನಮ್ಮ ಮಿತ್ರರು ವಿರೋಧಿಸುತ್ತೇವೆಂದು ಹೇಳಿದರೆ ವಿನ, ಅವರು ಅಂಶತಃ ಅದನ್ನು ವಿರೋಧಿಸಿದಹಾಗೆ ಕಾಣುತ್ತಿಲ್ಲ, ಶ್ರೀರಾಮಯ್ಯನವರು ಬೇಸ್‌ಮೆಂಟ್, ಫೌಂಡೇಷನ್, ಕಟ್ಟಡ ಎಂದು ಹೇಳಿದರು. ಯಾವುದು ಬೇಸ್‌ಮೆಂಟ್, ಯಾವುದು ಫೌಂಡೇಷನ್ ಎನ್ನುವುದನ್ನು ಅವರು ಅರ್ಥಮಾಡಿಕೊಂಡಿದ್ದರೆ ಹಾಗೆ ಹೇಳುತ್ತಿರಲಿಲ್ಲ. ಇವತ್ತಿನ ದಿವಸ ಒಂದು ಯೋಚನೆ ಮಾಡೋಣ. ಮೈಸೂರು ಸಂಸ್ಥಾನದಲ್ಲಿ ಮತ್ತ ಇಡೀ ಭಾರತಖಂಡದಲ್ಲಿ ರೇಷ್ಮೆ ಉತ್ಪತ್ತಿಯನ್ನು ತೆಗೆದುಕೊಂಡರೆ, ದೇಶದ ಸಂಪತ್ತನ್ನು ಪ್ರತಿವರ್ಷವೂ ಆರು ಕೋಟಿ ಎಂಟು ಕೋಟಿ ರೂಪಾಯಿನಷ್ಟು ಉತ್ಪತ್ತಿ ಮಾಡುವ ಬಹಳ ಮುಖ್ಯವಾದ ಕೈಗಾರಿಕೆ ಇದು. ಇದರಲ್ಲಿ ಇನ್ನೊಂದು ವೈಶಿಷ್ಟ್ಯವೇನೆಂದರೆ ಇದು ಒಂದು ಕಾಟೇಜ್ ಇಂಡಸ್ಟ್ರಿ ಇದ್ದಹಾಗೆ. ಇದು ಒಂದು ದೊಡ್ಡ ಇಂಡಸ್ಟ್ರೀ ಶುರುಮಾಡಿ ಒಂದು ಕಡೆ ನಡೆಸಿ ಅಲ್ಲಿ ಹೊಸದಾಗಿ ಒಂದು ಪಟ್ಟಣವನ್ನು ಮಾಡುವುದಲ್ಲ. ನಮ್ಮ ದೇಶದಲ್ಲಿ 10 ಲಕ್ಷ ಜನಗಳು ತಾವು ಇರುವಕಡೆ ವ್ಯವಸಾಯದ ಒಂದು ಉಪಕಸಬನ್ನುಮಾಡಿ ದೇಶದ ಉತ್ಪತ್ತಿಯನ್ನು ಜಾಸ್ತಿ ಮಾಡುವ ಕಸುಬಿದು. ಏತಕ್ಕೋಸ್ಕರ ಬಹಳ ಪ್ರಾಧಾನ್ಯವಾದ ಇಂಥ ಕೈಗಾರಿಕೆ ನಮ್ಮ ದೇಶದಲ್ಲಿ ಹಿಂದುಳಿದಿದೆ. ಇವತ್ತಿನ ದಿವಸ ಕೇಂದ್ರ ಸರ್ಕಾರದವರು ಇದರ ಅಭಿವೃದ್ಧಿ ಗೋಸ್ಕರ ಕೋಟ್ಯಾಂತರ ರೂಪಾಯಿಯನ್ನು ಖರ್ಚು ಮಾಡುತ್ತಾ ಇದ್ದಾಗ್ಯೂ ಕೂಡ, ನಮ್ಮ ರಾಜ್ಯದ ನೀತಿಯನ್ನು ನೋಡಿದರೆ ಖಂಡಿತವಾಗಿಯೂ ಕೂಡ ಈ ನೀತಿಯಿಂದ ಈ ಕೈಗಾರಿಕೆ ಅಭಿವೃದ್ಧಿಗೆ ಬರುತ್ತದೆಯೇ ಎಂದು ಯೋಚನೆಮಾಡಬೇಕು. ಇವತ್ತಿನ ದಿವಸ ಪ್ರಪಂಚದಲ್ಲಿ ಈ ಕೈಗಾರಿಕೆಯಲ್ಲಿ ಬಹಳ ಮುಂದುವರೆದ ದೇಶವೆಂದರೆ ಜಪಾನ್. ಜಪಾನ್ ದೇಶದಲ್ಲಿ ಈ ಕೈಗಾರಿಕೆ ಏಕೆ ಮುಂದುವರೆಯುತ್ತಾ ಇದೆಯೆಂದರೆ ಅಲ್ಲಿ 200 ಸ್ಕೀಮುಗಳಿವೆ. ಅಲ್ಲಿನ ಸೆರಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ಸಾವಿರ ರೇಸಸ್ ಇವೆ. ನಮ್ಮದಾದರೂ ಲೆಕ್ಕ ಹಾಕಿದರೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 30 ಸ್ಕೀಮುಗಳನ್ನು ಕೊಟ್ಟಿದ್ದಾರೆ. ಎರಡು ಮೂರು ವರ್ಷವಾದನಂತರ, ಆ ಸ್ಕೀಮುಗಳಲ್ಲಿ, 10 ಸ್ಕೀಮುಗಳನ್ನು ಬಿಟ್ಟು ಬಿಡೋಣವೆಂದು ಸರ್ಕಾರದವರು ಹೇಳಿದ್ದಾರೆ. ಈ 20 ಸ್ಕೀಮುಗಳಲ್ಲಿ ನಮೂದು ಮಾಡಿರುವ ಫಲಿತಾಂಶವನ್ನು ನೋಡಿದ ಪಕ್ಷದಲ್ಲಿ, ಖಂಡಿತವಾಗಿಯೂ ಸರ್ಕಾರದವರು ಈ ಕಡೆ ಗಮನವಿಟ್ಟು ನೋಡಿಲ್ಲ.

ಎರಡನೆಯದಾಗಿ ನಮ್ಮ ಆರ್ಥಿಕ ಮಂತ್ರಿಗಳು, ಅನೇಕ ಬಾಬುಗಳಲ್ಲಿ ಹಣ ಲ್ಯಾಪ್ಸ್ ಆಗುವುದನ್ನು ಲೆಕ್ಕ ಹಾಕಿದರೆ, ರೇಷ್ಮೆ ಕೈಗಾರಿಕೆಯಲ್ಲಿ ಜಾಸ್ತಿ ಲ್ಯಾಪ್ಸ್ ಮಾಡಿದ್ದಾರೆಂದರೆ ಖಂಡಿತ ತಪ್ಪಾಗಲಾರದು. ಇವರ ಉದ್ದೇಶವನ್ನು ಪುಸ್ತಕಗಳಲ್ಲಿ ಹೀಗೆ ಮಾಡಬೇಕು, ಹಾಗೆ ಮಾಡಬೇಕು ಎಂದು ಅಚ್ಚು ಹಾಕಿದ್ದರೂ ಕೂಡ, ಯೋಜನೆಗಳ ಕೆಲಸ ಮಾತ್ರ ಕಾಗದದಲ್ಲಿ ಮುಂದುವರಿದು, ಸಂಬಂಧಪಟ್ಟ ಜನತೆಗೆ ಯಾವ ಅನುಕೂಲವೂ ಆಗಬಾರದೆಂದು ಇದೆಯೋ ಏನೋ ಎಂದು ನನಗನ್ನಿಸುತ್ತದೆ. ಜಪಾನ್ ದೇಶದಲ್ಲಿ 200 ಯೋಜನೆಗಳನ್ನಿಟ್ಟುಕೊಂಡು, ರೇಷ್ಮೆ ಕೈಗಾರಿಕೆಯ ಮೂಲವನ್ನು ತಿಳಿದು ಅದರ ಪ್ರಗತಿಯನ್ನು ಸಾಧಿಸುತ್ತಿದ್ದಾರೆ, ನಾವು ಏನು ಮಾಡುತ್ತಿದ್ದೇವೆ ಎಂಬುದಕ್ಕೆ ನಮ್ಮ ಸರ್ಕಾರ ಕಣ್ಣು ತೆರೆದು ನೋಡಿಲ್ಲವೆಂದು ಹೇಳಬೇಕಾಗಿದೆ. ಸಾಯಿಲ್ ಟೆಸ್ಟಿಂಗಿಗೆ ಒಬ್ಬ ಸ್ಪೆಷಲಿಸ್ಟ್, ಗೊಬ್ಬರದ ವಿಷಯಕ್ಕೆ ಒಬ್ಬ ಸ್ಪೆಷಲಿಸ್ಟ್, ಗ್ರಾಫ್ಟಿಂಗ್‌ಗಾಗಿಯೇ ಒಬ್ಬ ಸ್ಪೆಷಲಿಸ್ಟ್, pests and parasite control for mulberry ಗಾಗಿಯೇ ಒಬ್ಬ ಸ್ಪೆಷಲಿಸ್ಟ್, worm rearing, egg classification, ಹೀಗೆ ಜಪಾನ್ ದೇಶದಲ್ಲಿ ರೇಷ್ಮೆ ಕೈಗಾರಿಕೆಗೆ ಸಂಬಂಧಪಟ್ಟ ಪ್ರತಿಯೊಂದಕ್ಕೂ ಒಂದೊಂದು ಯೋಜನೆ ಇದು ಅದಕ್ಕೆ ಒಬ್ಬ ಸ್ಪೆಷ

ಲಿಸ್ಟ್ ಇರುತ್ತಾರೆ. ನಮ್ಮಲ್ಲಿ ಆ ರೀತಿ ಇಲ್ಲ ಮತ್ತು ಈ ಕೈಗಾರಿಕೆ ಅಷ್ಟಾಗಿ ಮುಂದುವರಿದಿಲ್ಲ. ನಮ್ಮ ದೇಶದಲ್ಲಿ ಬಹಳ ಸಾಧಿಸಿದ್ದೇವೆಂದರೂ ಜಪಾನ್ ದೇಶಕ್ಕೆ ಹೋಲಿಸಿದರೆ ಏನೂ ಇಲ್ಲ. ವಿಜ್ಞಾನ ಎಷ್ಟು ಮುಂದುವರಿದಿದೆ ಎಂದರೆ ರೇಷ್ಮೆಗೆ ಪ್ರೈಪೋಟಿಯಾಗಿ ನಿಲ್ಲುವಂತೆ ಕೃತಕ ರೇಷ್ಮೆ ತಯಾರಾಗುತ್ತಿದೆ. ಲಿಕ್ವಿಡ್ ನೈಟ್ರೋಜನ್ ಸಾಲಿಡ್ ಮಾಡಿ, ಕೇವಲ ನೈಟ್ರೋಜನ್‌ನಿಂದಲೇ ರೇಯಾನ್ ತಯಾರು ಮಾಡುತ್ತಿದ್ದಾರೆ. ಕಡಲೆಕಾಯಿಯಲ್ಲಿರುವ ನೈಟ್ರೋಜನ್ ಭಾಗವನ್ನು ತೆಗೆದು ರೇಷ್ಮೆಯನ್ನು ಮಾಡುತ್ತಿದ್ದಾರೆ. ಇದರ ಬೆಲೆಯನ್ನು ನೋಡಿದಪಕ್ಷದಲ್ಲಿ ಬಹಳ ಕಡಮೆ ಇದೆ. ನಿಜವಾದ ರೇಷ್ಮೆ ಮೇಲಿನ ಪ್ರೈಪೋಟಿಗೆ ಅನೇಕ ತರಹ ಹೊಸದಾಗಿ ಮಾರುಕಟ್ಟೆಗೆ ಬರುತ್ತಿದೆ. ಜಪಾನ್ ದೇಶದಲ್ಲಿ 200 ಯೋಜನೆಗಳನ್ನು ಹಾಕಿದ್ದಾರೆ ರೇಷ್ಮೆಯನ್ನು ಉತ್ತಮ ರೀತಿಯಲ್ಲಿ ಪಡೆಯಲು ಎಷ್ಟೋ ಅನುಕೂಲಗಳಿವೆ. ಈ ಉದ್ಯಮದಲ್ಲಿ ತೊಡಗಿರುವವನಿಗೆ ಯಾವುದಾದರೂ ಅನುಮಾನ ಬಂದರೆ, ಅಥವಾ ಯಾವುದಾದರೂ ಒಂದು ಭಾಗದಲ್ಲಿ ಕಷ್ಟ ಬಂದಾಗ ಸಂಬಂಧಪಟ್ಟವರಿಗೆ ಒಂದು ಕಾಗದವನ್ನು ಬರೆದರೆ ಆಗ ಸಂಬಂಧ ಪಟ್ಟ expert ತಕ್ಷಣ ಬಂದು ಇಲ್ಲವೇ ಕಾಗದ ತಲುಪಿದ ತಕ್ಷಣ ಆ ವಿಚಾರದಲ್ಲಿ ತನ್ನ ಸಲಹೆಯನ್ನು ಕಾಗದದ ಮೂಲಕ ಕೊಡುತ್ತಾನೆ. ನಮ್ಮ ದೇಶದಲ್ಲಿ ಸರ್ಕಾರ ಹಾಕಿಕೊಂಡಿರುವ ಯೋಜನೆಗಳನ್ನು ನೋಡಿದರೆ, ಅವು ಕಾರ್ಯಗತವಾಗದೆ ಇರುವುದರಿಂದ ಏನು ಆದಹಾಗಾಯಿತು. ಕಳೆದ ವರ್ಷ Sericulture Division ಎಂದು ಮಾಡಿ ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರನ್ನು ಹಾಕಿದರು. ಸಾಧಾರಣವಾಗಿ ಎಕ್ಸಿಕ್ಯೂಟಿವ್ ಇಂಜಿನಿಯರಿಗೆ 25 ಲಕ್ಷ ರೂಪಾಯಿ work load ಕೊಡಬೇಕೆಂದು ಮಾಡಿದ್ದಾರೆ. ಆದರೆ ನಾಲ್ಕು ಯೋಜನೆಗಳನ್ನು ಹಾಕಿ ಹತ್ತು ಲಕ್ಷ ರೂಪಾಯಿಗಳನ್ನು ಅವರಿಗೆ ಕೊಟ್ಟಿದ್ದಾರೆ. ಈ ಹತ್ತು ಲಕ್ಷ ರೂಪಾಯಿ ಯೋಜನೆಗಳು ಆರೆಂಟು ತಿಂಗಳಾದರೂ ಮಂಜೂರಾಗಿ ಸರ್ಕಾರದಿಂದ ಹಿಂದಕ್ಕೆ ಹೋಗಿಲ್ಲ. ಎಕ್ಸಿಕ್ಯೂಟಿವ್ ಇಂಜಿನಿಯರ ಕೆಲಸವೇನೆಂದರೆ ಏನೂ ಇಲ್ಲ. ಅವರ ಪ್ರೋಗ್ರೆಸ್ ಏನೂ ಇಲ್ಲ. ನಾವೇನಾದರೂ ಕೇಳಿದರೆ.........

Sri T. MARIAPPA.—Is all this relevant to the resolution before the House ?

Sri C. K. RAJAIAH SETTY.—Yes. I will tell you how. ಇವೊತ್ತು ಸರ್ಕಾರ ಕೆಲವು ಯೋಜನೆಗಳನ್ನು ಹಾಕಿಕೊಂಡಿದೆ. ಕೆಲವು ಯೋಜನೆಗಳನ್ನು ಕೊಟ್ಟಿರುವುದನ್ನು ನೋಡಿದ ಪಕ್ಷದಲ್ಲಿ 'Due to the economic condition we have left over the Scheme' ಎಂದು ಹೇಳಿದ್ದಾರೆ. ವರ್ಷ ಒಂದಕ್ಕೆ ಆರೆಂಟು ಕೋಟಿ ರೂಪಾಯಿ ಆದಾಯವನ್ನು ತರುವ ವ್ಯವಸಾಯದ ವಿಚಾರದಲ್ಲಿ ಕಡೆಗಣ್ಣಿನಿಂದ ನೋಡುತ್ತಿದ್ದಾರೆ ಎಂದರೆ ತಪ್ಪಾಗುವುದಿಲ್ಲ. ಆದುದರಿಂದ ಶಾಸ್ತ್ರೀಯ ರೀತಿಯಲ್ಲಿ ತಜ್ಞರಿಂದ ಕೂಡಿದ ಒಂದು ಕಾರ್ಪೊರೇಷನ್ ಅಥವಾ ಬೋರ್ಡ್ ಇಲ್ಲದೆ ಇದ್ದ ಪಕ್ಷದಲ್ಲಿ ಇಡೀ ಕೈಗಾರಿಕೆಯೇ ನಶಿಸಿಹೋಗುತ್ತದೆಂದು ಕಾಣುತ್ತದೆ.

ಶ್ರೀ ಟಿ. ಮರಿಯಪ್ಪ.—ನಿರ್ಣಯವಿರುವುದು ಕಾರ್ಪೊರೇಷನ್ ಏಕೆ ಮಾಡಬೇಕು ಎಂದು. ಅದರಲ್ಲಿರುವ ಪದಗಳನ್ನು ತಾವು ಓದಿ. ಸಿಲ್ಕ್ ಫಿಲೇಚರ್ಸ್, ಸ್ಪನ್ ಸಿಲ್ಕ್ ಮಿಲ್ಸ್ ಇವುಗಳನ್ನು ಅಭಿವೃದ್ಧಿ ಮಾಡಲು ಕಾರ್ಪೊರೇಷನ್ ಬೇಕೆಂದು ಹೇಳಿದ್ದಾರೆ. ಬಾಕಿಯದಕ್ಕಲ್ಲ. ಒಂದಕ್ಕೊಂದಕ್ಕೆ ಕನ್‌ಫ್ಯೂಸ್ ಮಾಡಿ series of schemesಗೆ ಕಾರ್ಪೊರೇಷನ್ ಮಾಡಿ ಎಂದು ಹೇಳುತ್ತೀರಿ. ಆದರೆ ಕಾರ್ಪೊರೇಷನ್‌ಗೆ ದುಡ್ಡು ಎಲ್ಲಿಂದ ಬರುತ್ತದೆ ಎಂದು ಹೇಳುವುದಿಲ್ಲ. You should not give a wrong impression to the House. ಶ್ರೀ ವೆಂಕಟಪ್ಪನವರು ಮಾತನಾಡುವಾಗ ರಚನಾತ್ಮಕವಾದಂಥ ಸಲಹೆಗಳನ್ನು ಹೇಳಿದ್ದಾರೆ.

Sri C. K. RAJAIAH SETTY.—I am telling what Government is doing in some of the schemes. Working cost of the product, ಏನು ಉತ್ಪತ್ತಿಯಾಗುತ್ತದೆಯೋ ಅದರ ಬೆಲೆ, ಕಡಮೆಯಾದ ಪಕ್ಷದಲ್ಲಿ ಈ ವ್ಯವಸಾಯ ವೇನಿದೆಯೋ ಅದರಲ್ಲಿ ಒಂದು ವಿಧವಾದ ಕ್ರಾಂತಿಕಾರಕ ಮಾರ್ಪಾಡು ಆಗುತ್ತದೆ.

ಶ್ರೀ ಟಿ. ಮರಿಯಪ್ಪ.—ತಾವು ನಿರ್ಣಯದ ಮೇಲೆ ಮಾತನಾಡುತ್ತಿದ್ದೀರೋ ಅಥವಾ ಅಮೆಂಡ್‌ಮೆಂಟಿನಮೇಲೆ ಮಾತನಾಡುತ್ತಿದ್ದೀರೋ ?

Sri C. K. RAJAIAH SETTY.—I am speaking on both.

ಎರಡನೆಯದು ಏನೆಂದರೆ ಇಲಾಖೆಯಲ್ಲಿರುವ ಆಡಳಿತ ಯಂತ್ರ ಏನಿದೆಯೋ ಅದನ್ನು ಪೂರ್ಣವಾಗಿ ಬದಲಾಯಿಸಿ ಈ ರೇಷ್ಮೆ ಕೈಗಾರಿಕೆಯ ವಿಷಯವನ್ನು ತಿಳಿದಿರುವವರನ್ನು ಇಲಾಖೆಗೆ ಹಾಕಬೇಕು. ಜಪಾನ್ ದೇಶದಲ್ಲಿ 200 ಸ್ಕೀಂಗಳಿವೆ ಎಂದು ಹೇಳಿದೆ. ಪ್ರತಿಯೊಂದರಲ್ಲಿಯೂ ಒಬ್ಬ ಸ್ಪೆಷಲಿಸ್ಟ್ ಆಗಿರುವವನಿರುತ್ತಾನೆ. ಇಲಾಖೆಯಲ್ಲಿ ಸಾಧ್ಯವಾದಷ್ಟು ಮಟ್ಟಿಗೂ ಸ್ಪೆಷಲಿಸ್ಟ್ ಇರಬೇಕು. ಹೀಗಾದಲ್ಲಿ ಈ ವ್ಯವಸಾಯ ಮತ್ತು ಕೈಗಾರಿಕೆ ಅಭಿವೃದ್ಧಿ ಹೊಂದಲು ಅವಕಾಶವಾಗುತ್ತದೆ. ನಮ್ಮ ಸ್ನೇಹಿತರೊಬ್ಬರು ಹೇಳಿದಂತೆ, the mansions of Avenue Road and Visvesvarapuram are built out of silk worm. ಈ ದೇಶದಲ್ಲಿನ ಪ್ರಗತಿಯೆಲ್ಲ ಈ ಕೈಗಾರಿಕೆಯಿಂದಲೇ ಆಯಿತು ಎಂದರೆ ಐಶ್ವರ್ಯವೆಲ್ಲ ಈ ರೇಷ್ಮೆ ಕೈಗಾರಿಕೆಯಿಂದಲೇ ಬಂದಿದೆ ಎಂದು ಎಲ್ಲರಿಗೂ ತಿಳಿದಿದೆ ಎಂದು ಕಾಣುತ್ತದೆ. ಅಂಥ ಒಂದು ಕೈಗಾರಿಕೆಗೆ ಒಂದು ಡೆವಲಪ್‌ಮೆಂಟ್ ಬೋರ್ಡ್ ಬೇಕು, ಅಟಾನಮಸ್ ಬೋರ್ಡ್ ಬೇಕು. ಸರ್ಕಾರ ದುಡ್ಡು ಕೊಡುವುದರಲ್ಲಿ ನಿಧಾನವಾಗಿ ಅದರಿಂದ ಇದರ ಕೆಲಸ ಕಾರ್ಯಗಳು ಕುಂಠಿತವಾಗುವುದಕ್ಕೆ ಅವಕಾಶವಾಗಬಹುದಾದ್ದರಿಂದ ಅಟಾನಮಸ್ ಡೆವಲಪ್‌ಮೆಂಟ್ ಬೋರ್ಡ್ ಇದ್ದ ಪಕ್ಷದಲ್ಲಿ ಈ ಉದ್ಯಮವು ಅಭಿವೃದ್ಧಿಯಾಗಲು ಅವಕಾಶವಾಗುತ್ತದೆ. ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನಲ್ಲಿ, ಸಿಲ್ಕ್ ಬೋರ್ಡಿನಲ್ಲಿ ಎಷ್ಟು ಜನ ತಜ್ಞರಿದ್ದಾರೆ, ಈ ವಿಷಯವನ್ನು ಎಷ್ಟು ಜನ ಕೂಲಂಕಷವಾಗಿ ಯೋಚನೆ ಮಾಡುತ್ತಾರೆ? ಇವೊತ್ತು ಸರ್ಕಾರದವರು ಒಂದೇ ಒಂದು ಪ್ರಶ್ನೆಗೆ ಉತ್ತರ ಹೇಳಬೇಕು. ಯೋಜನೆಗಳಿಗೆ ಒದಗಿಸುವ ಹಣದಲ್ಲಿ ಇಷ್ಟೊಂದು ಹಣ ಲ್ಯಾಪ್ಸ್ ಆಗಲು ಕಾರಣವೇನು? ಹಾಕಿರುವ ಯೋಜನೆಗಳನ್ನು ಯಾವ ರೀತಿ ಕಾರ್ಯರೂಪಕ್ಕೆ ತರುತ್ತೀರಿ, ಅದರಲ್ಲಿ ಲೋಪವೇನಾದರೂ ಇದೆಯೇ ಎಂಬುದನ್ನು ಯೋಚನೆ ಮಾಡಬೇಕು.

(SRI C. K. RAJAIAH SETTY.)

ರೇಷ್ಮೆ ಕಾರ್ಖಾನೆಗಳಲ್ಲಿ ಕಾರ್ಮಿಕರಿಗೆ ದಿನ ಒಂದಕ್ಕೆ ಆರಾಣೆ ಬೇಸಿಕ್ ರೇಟ್ ಗೊತ್ತು ಮಾಡಿದ್ದಾರೆ. ಇಪ್ಪತ್ತನೆಯ ಶತಮಾನದಲ್ಲಿ ದಿನ ಒಂದಕ್ಕೆ ಆರಾಣೆ ಬೇಸಿಕ್ ವೇಜಸ್ ಗೊತ್ತುಮಾಡಿ ಯಾವುದಾದರೂ ಕೊಡುತ್ತಾರೆಂದರೆ ಹಾಸ್ಯಾಸ್ಪದವಾದ ಮಾತು. ನಿಜವಾಗಿಯೂ ಸರ್ಕಾರ ಈ ಕೈಗಾರಿಕೆಯನ್ನು ಮುಚ್ಚಿಬಿಟ್ಟು ಅವರಿಗೆಲ್ಲ ಬೇರೆ ಕೆಲಸವನ್ನು ಕೊಡಿಸುವುದು ಉತ್ತಮವೆಂದು ಕಾಣುತ್ತದೆ.

ಜಪಾನ್ ದೇಶದಲ್ಲಿ thousand races ಇವೆ. ಆದರೆ ನಮ್ಮಲ್ಲಿ ಮೂರು races ಮಾತ್ರ ಇವೆ. ನಮ್ಮಲ್ಲಿಯೂ ಈ races ಉತ್ತಮ ಪಡಿಸಲು ಸರ್ಕಾರ ಪ್ರಯತ್ನ ಮಾಡಬೇಕು. ಹೀಗೆ ನೋಡುವಾಗ ಇದರಲ್ಲಿ ಸ್ವಲ್ಪ ಕುಂಠಿತವಾಗಿ ಅದರಲ್ಲಿ ಕೂಡ ಈ ಉದ್ಯಮವನ್ನು ಕೈಕೊಂಡಿರುವವರಿಗೆ ಬೆದರಿಕೆ ಹುಟ್ಟುತ್ತದೆ. ಸರ್ಕಾರ ಇದರಲ್ಲಿ ಏಕೆ ಸಾಕಷ್ಟು ಆಸಕ್ತಿಯನ್ನು ವಹಿಸಿಲ್ಲವೆಂದು ಕೇಳಬೇಕಾಗಿದೆ. ನಮ್ಮದೇಶದಲ್ಲಿನ ರೇಷ್ಮೆ ಕೈಗಾರಿಕೆ ಅಭಿವೃದ್ಧಿಯಾಗಿಲ್ಲವೆನ್ನುವ ಉದ್ದೇಶದಿಂದ ಶ್ರೀ ಮಲ್ಲಾರಾಧ್ಯರು ಒಂದು ತಿದ್ದುಪಡಿಯನ್ನು ಕೊಟ್ಟಿದ್ದಾರೆ. ನಿಜವಾಗಿಯೂ ಕೂಡ ಶಾಸ್ತ್ರೀಯ ರೀತಿಯಲ್ಲಿ ಈ ಒಂದು ಉದ್ಯಮ ದೇಶದಲ್ಲಿ ಉಳಿಯಲು, ದೇಶಕ್ಕೆ ಬರುತ್ತಿರುವ 8-10 ಕೋಟಿ ರೂಪಾಯಿ ಆದಾಯಕ್ಕೆ ಯಾವ ವಿಧವಾದ ಕುಂದಕವೂ ಬರದೆ ಇರಲು ತಜ್ಞರಿಂದ ಕೂಡಿದ ಡೆವಲಪ್‌ಮೆಂಟ್ ಬೋರ್ಡ್ ರಚಿಸುವುದು ಸೂಕ್ತವೆಂದು ಕಾಣುತ್ತದೆ.

ಮೈಸೂರಿನಲ್ಲಿ ಒಂದು ಸಿರಿಕಲ್ಚರ್ ಅಡ್ವೈಸರಿ ಬೋರ್ಡ್ ಇದೆ. ಈ ಅಡ್ವೈಸರಿ ಬೋರ್ಡಿನವರು ಮಾಡಿದ ಠರಾವುಗಳನ್ನೆಲ್ಲ ಸರ್ಕಾರ ಅಂಗೀಕರಿಸಬೇಕಾಗಿದೆ ಎನ್ನುವ ಕಡ್ಡಾಯವೇನೂ ಇಲ್ಲ. ಸರ್ಕಾರ ಬಿಚ್ಚು ಮನಸ್ಸಿನಿಂದ, ಈ ಒಂದು ಉದ್ಯಮವು ಅಭಿವೃದ್ಧಿಯಾಗಬೇಕಾದ ಪಕ್ಷದಲ್ಲಿ ಇದಕ್ಕೋಸ್ಕರ ಎಷ್ಟು ಹಣವನ್ನು ಮೀಸಲಾಗಿಟ್ಟಿದೆಯೋ ಆ ಹಣವನ್ನೆಲ್ಲ ಈ ಅಟಾನಮಸ್ ಬೋರ್ಡಿಗೆ ಕೊಡಬೇಕು.

ಸ್ಕೀಮುಗಳನ್ನು ಕಾರ್ಯತಃ ಕಾರ್ಯರೂಪಕ್ಕೆ ತರಬೇಕೆಂದು ಮಾಡಿದ್ದರೂ ಆಗಲಿಲ್ಲ. ಪೇಪರಿನಲ್ಲೇನೋ ಇಪ್ಪತ್ತು ಸ್ಕೀಮುಗಳೆಂದಿವೆ. ಕಳೆದ ಮೂರು ವರ್ಷಗಳಿಂದ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಆಗಿರುವ ಪ್ರಗತಿಯನ್ನು ನೋಡಿದರೆ ಕೇವಲ ಶೇಕಡ ಹದಿನೈದರಷ್ಟು ಅಥವಾ ಇಪ್ಪತ್ತರಷ್ಟು ಕೂಡ ಸಾಧನೆಯನ್ನು ಮಾಡಿದ್ದಾರೋ ಇಲ್ಲವೋ ಎನ್ನುವುದು ಎದ್ದು ಕಾಣುತ್ತದೆ. ಅಲ್ಲದೆ ಈಗ ಹತ್ತು ವರ್ಷಗಳಿಂದಲೂ ಸಿಲ್ಕ್‌ಗೆ ಸರಿಯಾದ ಮಾರ್ಕೆಟ್ಟು ಕೂಡ ಇಲ್ಲದೆ, ಸಿಲ್ಕಿನ ಇಂಡಸ್ಟ್ರಿ ಯಶಸ್ವಿಯಾಗಲು ತಕ್ಕಷ್ಟು ಸೌಕರ್ಯಗಳೂ ದೊರಯುತ್ತಿಲ್ಲ.

ಇನ್ನು quality ವಿಚಾರ ನೋಡಿದರೆ, ಎಷ್ಟು ಅಭಿವೃದ್ಧಿಯಾಗಬೇಕೋ ಅಷ್ಟಾಗಿಲ್ಲ. ಇದರಲ್ಲಿ ಆರು ತರಹ ಕ್ಲಾಸುಗಳಿವೆ. ಇದರಲ್ಲಿ "b" ಕ್ಲಾಸಿನವರೆಗೆ ಇದೆ. ನಮ್ಮ ಸಿಲ್ಕಿನ quality ಮತ್ತು ವ್ಯಾಪಾರವಾಗುವುದನ್ನು ನೋಡಿದರೆ "E" classಗೆ ಕೂಡ ಬರುತ್ತಿಲ್ಲ. ಹೀಗೆ ನಮ್ಮಲ್ಲಿ superior qualityಯನ್ನು ತಯಾರುಮಾಡಲು ತಜ್ಞರಾದವರು ನಮ್ಮಲ್ಲಿಲ್ಲವೋ ಅಥವಾ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಅಷ್ಟು ತಜ್ಞರಲ್ಲವೋ ಏನೋ. ಇನ್ನೂ ಪ್ರಪಂಚದ ಮಾರ್ಕೆಟ್ಟಿಗೆ ತಕ್ಕಂತೆ ಮಾರಲು ನಮ್ಮ qualityಯನ್ನು improvement ಮಾಡಿಕೊಳ್ಳುವುದಕ್ಕೆ ಅಸಾಧ್ಯವಾಗಿದೆ.

ಇನ್ನು ಚನ್ನಪಟ್ಟಣದಲ್ಲಿದ್ದ ಸಿಲ್ಕುಮಿಲ್ಲನ್ನು ಮುಚ್ಚಲು ಸರಕಾರದ ಧೋರಣೆಯಲ್ಲಿ ರಾಜಕೀಯ ಪ್ರವೇಶಿಸಿ ಬಿಟ್ಟಿರುವುದೇ ಕಾರಣವಾಗಿದೆ. ಚನ್ನಪಟ್ಟಣದಲ್ಲಿರುವ ಬೀದಿಯಲ್ಲಿ ಹೋಗುವ ಒಬ್ಬ ಸಾಮಾನ್ಯ ಮನುಷ್ಯನನ್ನು ಕೇಳಿದರೂ ಇದರಲ್ಲಿ ಏನೋ ಇಂಟರ್ ಫಿಯರೆನ್ಸು ಇದೆ ಎಂದು ಹೇಳುತ್ತಾನೆ.

ನಮ್ಮಲ್ಲಿ ಎಲ್ಲೂ ದೊರೆಯದಷ್ಟು ಹೆಚ್ಚಾಗಿ "ವೇಸ್ಟು ಸಿಲ್ಕು" ಎನ್ನುವುದು ಸಿಕ್ಕುತ್ತಿದೆ. ಇಂತಹ waste silkನ್ನು ಉತ್ತಮ ಪಡಿಸುವುದಕ್ಕೆ ಇಂತಹ ಸರಕಾರದ ಕಾರ್ಖಾನೆ ಇರಬೇಕಾದುದು ಅಗತ್ಯವಾಗಿತ್ತು. ಈ ಕಾರ್ಖಾನೆಯನ್ನು ನಡೆಸಲು ಲಕ್ಷಾಂತರ ರೂಪಾಯಿಗಳು ಬೇಕಾದರೂ ಸರಕಾರ compensation ರೂಪದಲ್ಲಿ ಕೊಟ್ಟು ಈ factoryಯನ್ನು ನಡೆಸಬೇಕು. ಇದನ್ನು ಮಾಡದೆ ಇರುವುದರಿಂದ ಇಲ್ಲಿನ ಉತ್ಪನ್ನ ಹಾಳಾಗುತ್ತಿದೆ. National interestನಿಂದ ಇಂತಹ ಕೈಗಾರಿಕೆಯನ್ನು ಮುಂದಕ್ಕೆ ತರಬೇಕಾದುದು ಅಗತ್ಯವಾಗಿದೆ. South-East Asiaದಲ್ಲಿಯೇ ನಮ್ಮ ಮೈಸೂರು ದೇಶದಲ್ಲಿರುವಂತಹ, filature factory ಇಲ್ಲ ಎಂದು ಹೇಳುತ್ತಾರೆ. ನಮ್ಮ ಭರತ ಖಂಡದಲ್ಲೆಲ್ಲ ಮೈಸೂರಿನಲ್ಲಿ ಉತ್ಪತ್ತಿಯಾಗುವಷ್ಟು ಸಿಲ್ಕು ಇನ್ನೆಲ್ಲಿಯೂ ಇಲ್ಲ ಎಂದು ಹೇಳುತ್ತಾರೆ. ಇಷ್ಟೊಂದು waste silk ಬರುತ್ತಿರುವುದು ಹಾಳಾಗಿಹೋಗುತ್ತಿದೆ. ಇದಕ್ಕೆ ಸರಕಾರ ಶೇಕಡ ಹತ್ತರಷ್ಟು ಹಣವನ್ನು ಹಾಕಿರಬಹುದು. ಇಲ್ಲಿರುವ ಬೋರ್ಡಿನಲ್ಲಿ ಸರಕಾರದ ಒಬ್ಬರು ಡೈರೆಕ್ಟರು ಇರಬೇಕು. Government has got a right to appoint a Managing Director. ಅವರು ರೆಸಲ್ಯೂಷನನ್ನು ಮಾಡಿದ್ದರೂ ಕೂಡ ಆಗಿದ್ದ ಶ್ರೀ ತಿಪ್ಪೆರುದ್ರಯ್ಯನವರು ಮ್ಯಾನೇಜಿಂಗ್ ಡೈರೆಕ್ಟರಿನ ಸ್ಥಾನಕ್ಕೆ ಏಕೆ ರಾಜಿನಾಮೆ ಕೊಟ್ಟರಿ ಎಂದು ಅವರನ್ನು personal ಆಗಿ ಕೇಳಿದಾಗ ಅವರು ನನಗೆ ಆ ವಿಚಾರದಲ್ಲಿ ಮಾತನಾಡಬೇಡಿ, ನನಗೆ ಬೇಜಾರಾಗುತ್ತದೆ ಎಂದು ಹೇಳಿದರು. ಸರಕಾರಕ್ಕೆ ಇವೆಲ್ಲ ಗೊತ್ತಿಲ್ಲದೇ ಏನೂ ಇಲ್ಲ. ಇದನ್ನೆಲ್ಲ ಬಿಟ್ಟು ದೇಶದ ಒಂದು ಮುಖ್ಯವಾದ ಧ್ಯೇಯದ ದೃಷ್ಟಿಯಿಂದ ಈ ಕೈಗಾರಿಕೆಯು ಪ್ರಗತಿ ಹೊಂದಲಿ ಎನ್ನುವ ದೃಷ್ಟಿಯಿಂದ ಮಾಡಿದರೆ ಖಂಡಿತವಾಗಿಯೂ ಇದು ಮುಂದಕ್ಕೆ ಬರುತ್ತದೆ ಎಂದು ನನಗನಿಸುತ್ತದೆ.

Mr. CHAIRMAN.—You have not shown how the corporation would be able to change the management and improve and all that. It is the management which is much more important.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹೀಗೆ ಮಾಡುವಾಗ ಸರಕಾರದ ಒಂದು ನಿಜವಾದ ನೀತಿ ಇರಬೇಕು. ಇದನ್ನು ಸುವ್ಯಸ್ಥಿತವಾಗಿ ಮಾಡಲು ಈ ಕೈಗಾರಿಕೆಯಲ್ಲಿನ ತಜ್ಞರಾದ ಪ್ರತಿನಿಧಿಗಳು ಇರಬೇಕು. ಇನ್ನೊಂದು ಕಡೆ ಇದರಲ್ಲಿರುವ machinery ಹೇಗಿದೆ, dependable ಆಗಿದೆಯೇ ಇಲ್ಲವೇ ಎನ್ನುವುದನ್ನೆಲ್ಲ ಪರಿಶೀಲಿಸಲು ತಜ್ಞರಾದವರು ಪ್ರವೇಶಿಸಿ ಸರಕಾರದ ಹಣಕಾಸನ್ನು ಹಾಕುವಂತಹ ಅಧಿಕಾರಿಗಳೂಬೇಕು. ಇದಕ್ಕೆ political outlook

ಕೊಟ್ಟು corporationನನ್ನು ಮಾಡಿದ ಪಕ್ಷದಲ್ಲಿ, ಶ್ರೀ ಲಿಂಗೇಗೌಡರು ಹೇಳಿದಂತಹ ಬೋರ್ಡಿನಂತೆ ಸ್ವಚ್ಛತೆಯಿಂದ ಕೂಡಿದಂತಹ ಬೋರ್ಡು ಎಂದಾಗುವುದಿಲ್ಲ. ಈ ಕೈಗಾರಿಕೆಗೆ ಸಂಬಂಧಪಟ್ಟಂತಹ ತಜ್ಞರು ಮತ್ತು ಈ ವಿಚಾರದಲ್ಲಿ ಅನುಭವವುಳ್ಳವರನ್ನೇ ಇದರಲ್ಲಿ ನಾಮನೇಟು ಮಾಡಿದರೆ ಬಹಳ ಅನುಕೂಲವಾಗುತ್ತದೆ. ಎಂಟು ಕೋಟಿ ರೂಪಾಯಿಗಳಷ್ಟು ಆದಾಯ ಬರುವಂತಹ ಮುಖ್ಯವಾದಂತಹ ಒಂದು ಉತ್ತಮವಾದ ರೆಸಲ್ಯೂಷನ್ನನ್ನು ತಂದಿರುವುದರ ಮೇಲೆ ಇಷ್ಟು ಲಘುವಾಗಿ ಯೋಚನೆಮಾಡುವುದು ಚೆನ್ನಾಗಿರುವುದಿಲ್ಲ.

ಶ್ರೀ ಟಿ. ಮರಿಯಪ್ಪ.—ನಾವು ಲಘುವಾಗಿ ವಿಚಾರಮಾಡುತ್ತಿಲ್ಲ. ಆದಷ್ಟು deep ಆಗಿಯೇ consider ಮಾಡಬೇಕೆಂದಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ತಾವುಗಳೆಲ್ಲರೂ ಯೋಚನೆಮಾಡುತ್ತಿದ್ದಾಗ್ಯೂ ಈ ನಿರ್ಣಯವನ್ನು ವಿರೋಧಪಕ್ಷದ ಸದಸ್ಯರು ತಂದಿದ್ದಾರೆಂದು ನೀವು ಅಂಗೀಕರಿಸದೆ ಸುಮ್ಮನೆ ಬಾಯಲ್ಲಿ ಹೇಳುತ್ತಿದ್ದೀರೆಂದು ನನಗನಿಸುತ್ತದೆ.

ಇನ್ನು basement ವಿಚಾರ ಎಂದರೆ.—

In any industrial development, the first basement is planning. To plan it properly you want an efficient body, yon want a Board which should be composed of experts.

ಇಂತಹ ಒಂದು ಬೋರ್ಡಿಗೆ ಬದಲಾಗಿ ಶ್ರೀ ಮಲ್ಲಾರಾಧ್ಯರು ತಿದ್ದುಪಡಿ ತಂದಿರುವಂತೆ ಒಂದು ಆಟಾನಮಸ್ ಆದ ಬೋರ್ಡನ್ನು ತರಬಾರದು ಎನ್ನುವ ಉದ್ದೇಶವಲ್ಲ. ಆದರೆ ಈ ತರಹದ ಬೋರ್ಡು, ಹಾಕಿರುವ ಬಂಡವಾಳವನ್ನು ಇತರ ಬೋರ್ಡುಗಳ ಜೊತೆಗೆ compare ಮಾಡಿದ ಪಕ್ಷದಲ್ಲಿ ಇದಕ್ಕಿಂತ ಉತ್ತಮವಾದ ಬೋರ್ಡಿನ ಅಗತ್ಯವೇ ಇಲ್ಲ ಎಂದು ಗೊತ್ತಾಗುತ್ತದೆ.

ಇವತ್ತಿನ ದಿವಸ ಇಂಡಸ್ಟ್ರಿಯಲ್ ಮಿನಿಸ್ಟರಿಗೆ ಸಿಲ್ಕ್ ಇಂಡಸ್ಟ್ರಿಯನ್ನು ಕೊಟ್ಟಿದ್ದಾರೆ. ಅವರು Sericulture industry ವಿಚಾರವಾಗಿ ಯೋಚನೆ ಮಾಡುವುದಕ್ಕೆ ಅವಕಾಶವಿದೆಯೇ ಎನ್ನುವುದನ್ನು ನೀವೇ ಯೋಚನೆಮಾಡಿ. ಅದೂ ನಮ್ಮ ಚೀಫ್ ಮಿನಿಸ್ಟರವರಿಗೇ ಸೇರಿದೆ. ನಮ್ಮ ಚೀಫ್ ಮಿನಿಸ್ಟರವರು ಒಂದು ದಿನಕ್ಕೆ ಆರುನೂರು ಫೈಲು ನೋಡಬೇಕು. 200 ಜನಗಳಿಗೆ interviews ಕೊಡಬೇಕು. ಐದಾರು ಭಾಷಣಗಳನ್ನು ಒಂದು ದಿನಕ್ಕೆ ಮಾಡಬೇಕೆಂದು ವ್ಯವಸ್ಥೆಮಾಡಿರುವುದರಿಂದ ಅವರಿಗೆ ಈ ಇಂಡಸ್ಟ್ರಿಯನ್ನು ಉತ್ತಮವಾಗಿ ಬೆಳೆಸಲು ಅವಕಾಶವಾಗುತ್ತಿಲ್ಲ. ಬರೀ ಸ್ಕೀಮೊಂದು ಮಾಡಿ ಸರಿಯಾದ ತಜ್ಞರು ಇಲ್ಲದೆ ಇರುವ ಕಾರಣ, ನಲವತ್ತು ರೂಪಾಯಿಗಳಿಗೆ purchase ಮಾಡುತ್ತಿದ್ದುದು, ಈಗ ಹನ್ನೆರಡು ರೂಪಾಯಿಗಳಿಗೆ ಇಳಿದಿದೆ. ಇದು ಎಷ್ಟರ ಮಟ್ಟಿಗೆ ಮುಂದುವರಿಯುತ್ತಿದೆ ಎನ್ನುವುದನ್ನು ನೀವೇ ಆಲೋಚನೆಮಾಡಬೇಕು. ಹೀಗಾಗುತ್ತಿರುವುದರಿಂದ ಪಕ್ಷಾತೀತವಾದ ಒಂದು ಬೋರ್ಡನ್ನು ಮಾಡುವ ಆವಶ್ಯಕತೆ ನಿಜವಾಗಿಯೂ ಇದೆ. ಇದರಲ್ಲಿ ರಾಜಕೀಯವೇನಿಲ್ಲ. ಆದಷ್ಟು ದೇಶದ ಸಂಪತ್ತನ್ನು ಜಾಸ್ತಿಮಾಡಿಕೊಳ್ಳಲು ಇಂತಹ ಒಂದು ರೆಸಲ್ಯೂಷನನ್ನು ತಾವು ಒಪ್ಪಬೇಕೆಂದು ಹೇಳಿ ಈ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

Mr. CHAIRMAN.—The House will now rise and meet again at 1 P.M.

The House adjourned at Thirty Minutes past Twelve of the Clock to meet again at One of the Clock on Wednesday, the 22nd April 1959.

WD 771—GPB—900—8-8-60.